بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 35

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

31 ಆಗಸ್ಟ್ 2023, 31 ಝುಹೂರ್ 1402 ಹಿಜರಿ ಶಮ್ಸಿ,
13 ಸಫರ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَالَّذِيْنَ اٰمَنُوْا بِاللّٰهِ وَرُسُلِهٖ
وَلَمْ يُفَرِّقُوْا بَيْنَ اَحَدٍ مِّنْهُمْ
اُولٰٓئِكَ سَوْفَ يُؤْتِيْهِمْ اُجُوْرَهُمْ

**(ಅನ್ನಿಸಾಅ್: 153)**

**ಅಂದರೆ: ಅಲ್ಲಾಹನನ್ನೂ ಅವನ (ಎಲ್ಲ) ಸಂದೇಶವಾಹಕರನ್ನೂ ನಂಬಿ, (ನಂಬಿಕೆಯ ವಿಚಾರದಲ್ಲಿ) ಅವರ ಮಧ್ಯೆ ಯಾರಲ್ಲೂ ವ್ಯತ್ಯಾಸ ಮಾಡದವರಾರೋ, ಅವರಿಗೆ ಅವರ ಪ್ರತಿಫಲವನ್ನು ಅವನು ಶೀಘ್ರದಲ್ಲೇ ನೀಡುವನು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**(2377)** ಹಝ್ರತ್ ಅನಸ್(ರ.ಅ) ಹೇಳಿದರು, ರಸೂಲುಲ್ಲಹ್(ಸ) ಅವರು ಬಹ್ರೇನ್‌ನಲ್ಲಿನ ಆಸ್ತಿಯನ್ನು ನೀಡಲು ಅನ್ಸಾರ್‌ಗಳನ್ನು ಕರೆದು ಹೇಳಿದರು: ಯಾ ರಸೂಲಲ್ಲಾಹ್!! ನೀವು ನಮಗೆ ನೀಡಿದರೆ, ನಮ್ಮ ಸಹೋದರರಾದ ಖುರೈಷಿಗಳಿಗೆ ಸಹ ಅದೇ ರೀತಿಯ ಆಸ್ತಿಯನ್ನು ನೀಡಿ. ಆದರೆ ಆ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರ ಬಳಿ ಬೇರೇನೂ ಇರಲಿಲ್ಲ. ಅವರು(ಸ) ಹೇಳಿದರು: ನನ್ನ ಬಳಿಕ ಇತರರನ್ನು ನಿಮ್ಮ ಮೇಲೆ ಆದ್ಯತೆ ನೀಡುವುದನ್ನು ನೀವು ಶೀಘ್ರದಲ್ಲೇ ನೋಡುತ್ತೀರಿ. ಆ ಸಮಯದಲ್ಲಿ ನೀವು ನನ್ನನ್ನು ಭೇಟಿಯಾಗುವವರೆಗೂ ತಾಳ್ಮೆಯಿಂದಿರಬೇಕು.

ಸರ್ವಶಕ್ತನಾದ ಅಲ್ಲಾಹನು ಅನ್ಸಾರ್‌ಗಳ ಬಗ್ಗೆ ಹೇಳುತ್ತಾನೆ: **ಯುಹಿಬ್ಬೂನ ಮನ್ ಹಾಜರ ಅಲೈಹಿಮ್ ವಲಾ ಯಜಿದೂನ ಫೀ ಸುದೂರಿಹಿಮ್ ಹಾಜತಮ್ಮಿಮ್ಮಾ ಊತೂ ವ ಯುಅ್‌ಸಿರೂನ ಅಲಾ ಅನ್‌ಫಿಸಿಹಿಮ್ ವ ಲೌಕಾನ ಬಿಹಿಮ್ ಖಸಾಸತುನ್;** (ಅಲ್‌ಹಶ್ರ್: 10) ವಲಸೆ ಬಂದು ಅನ್ಸಾರ್‌ಗಳ ಬಳಿಗೆ ಬಂದವರು ಅವರನ್ನು ಪ್ರೀತಿಸುತ್ತಾರೆ. ಮತ್ತು ಅವರಿಗೆ (ವಲಸಿಗರಿಗೆ) ನೀಡಲಾದ (ಸಂಪತ್ತಿಗೆ) ಅವರ ಹೃದಯದಲ್ಲಿ ಯಾವುದೇ ಆಸೆ ಇರಲಿಲ್ಲ ಮತ್ತು ಅವರು ತಮ್ಮ ಸ್ವಂತಕ್ಕಿಂತ ಅವರಿಗೆ ಆದ್ಯತೆ ನೀಡಿದರು. ಅವರಿಗೆ ಅಗತ್ಯವಿದ್ದರೂ ಸಹ.

ಹಝ್ರತ್ ಸೈಯದ್ ಝೈನುಲ್ ಅಬಿದೀನ್ ವಲಿಯುಲ್ಲಾ ಶಾಹ್ ಅವರು ಪವಿತ್ರ ಖುರ್‌ಆನ್ ವಿವರಣೆಯು ಅನ್ಸಾರ್‌ಗಳಿಗೆ ಸಂಪೂರ್ಣವಾಗಿ ನಿಜವೆಂದು ಮೇಲಿನ ಹದೀಸ್ ಸಾಬೀತುಪಡಿಸುತ್ತದೆ ಎಂದು ಹೇಳುತ್ತಾರೆ.

**(ಸಹೀಹ್ ಅಲ್-ಬುಖಾರಿ, ಸಂಪುಟ 4, ಕಿತಾಬ್ ಅಲ್-ಮಸಾಕಾತ್, ಪ್ರಕಟಿತ 2008, ಖಾದಿಯಾನ್)**

**MUSLIM TELEVISION AHMADIYYA INTERNATIONAL**
**www.mta.tv**

ದೇವನು ಯಾವತ್ತೂ ಮೃತರೊಂದಿಗೆ ಸಹಾಯ ಬೇಡಲು ಹೇಳಿಲ್ಲ. ನಿಜವಾಗಿಯೂ ದೇವನ ಸಾಮಿಪ್ಯ ಬಯಸುವಿರಾದರೆ ಜೀವದಾತನ ಮತ್ತು ಶಾಶ್ವತವನಾಗಿ ನೆಲೆನಿಲ್ಲುವವನಾದ ದೇವನನ್ನು ಸಂಪರ್ಕಿಸಿರಿ.
ಏಕೆಂದರೆ ನಮ್ಮ ದೇವನು ಜೀವಂತ ದೇವನೇ ಹೊರತು ಮೃತನಲ್ಲ, ಯಾರ ದೇವನು ಮೃತನಾಗಿರುವನೋ, ಯಾರ ಪುಸ್ತಕ ಮೃತವಾಗಿದೆಯೋ, ಅವರು ಸತ್ತವರ ಆಶೀರ್ವಾದ ಬೇಡಿದರೆ ಆಶ್ಚರ್ಯವಿಲ್ಲ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಮೃತರಿಂದ ಸಹಾಯ ಬೇಡುವುದು ಧರ್ಮಸಮ್ಮತವಲ್ಲ

ಎಲ್ಲಾ ವಿಷಯಗಳ ಸಾರಾಂಶವೇನೆಂದರೆ ದೇವನು ಯಾವತ್ತೂ ಮೃತರಿಂದ ಸಹಾಯ ಬೇಡಲು ಹೇಳಿಲ್ಲ. ಬದಲು ಬದುಕಿರುವವರ ಪ್ರಸ್ತಾವವೇ ಮಾಡಿರುತ್ತಾನೆ. ಇದು ಅಲ್ಲಾಹನ ಅನುಗ್ರಹವಾಗಿದೆ. ಅವನು ಇಸ್ಲಾಂ ಧರ್ಮವನ್ನು ಜೀವಂತರಿಗೆ ಒಪ್ಪಿಸಿರುತ್ತಾನೆ. ಇಸ್ಲಾಂ ಧರ್ಮವನ್ನು ಮೃತರಿಗೆ ಒಪ್ಪಿಸಿರುತ್ತಿದ್ದರೆ ಯಾವ ಆಪತ್ತು ಎದುರಿಸಬೇಕಾಗಿತ್ತೋ ತಿಳಿಯದು. ಮೃತರ ಗೋರಿಗಳಿಗೆ ಏನು ಕೊರತೆ ಇದೆ, ಮುಲ್ತಾನಿನಲ್ಲಿ ಏನು ಕಡಿಮೆ ಗೋರಿಗಳಿವೆಯೇ "ಗೋರುವು ಗರ್ಮಾ ಗದಾವೋ ಗೋರಿಸ್ತಾನ" ಎಂಬ ಗೋರಿ ಬಳಿ ಹೋದರು. ಅಲ್ಲಿಯ ಮುಜಾವರುಗಳು ಬಟ್ಟೆ ತೆರವುಗೊಳಿಸಲು ಹೇಳುತ್ತಾರೆ. ಪಾಕಪಟ್ಟಣದಲ್ಲಿ ನೋಡಿ ಮೃತರೊಂದಿಗೆ ಏನೇನೆಲ್ಲ ಬೇಡುತ್ತಿದ್ದಾರೆ? ಅಜ್ಮೀರಿಗೆ ಹೋಗಿ ನೋಡಿ ನವೀನಾಚರಣೆಗಳ (ಬಿದಅತ್) ಮತ್ತು ಡಂಬಾಚಾರಗಳ ಪೇಟೆ ನಡೆಯುತ್ತಿವೆ. ಅಂತಹ ಮೃತರನ್ನು ನೋಡಿದರೆ ನೀವು ಕಾಣಬಹುದು ಅಲ್ಲಿ ನವೀನಾಚರಣೆ ಮತ್ತು ಅಂಧವಿಶ್ವಾಸ ಕರ್ಮಗಳ ಹೊರತು ಬೇರೇನು ಕಂಡು ಬರುವುದಿಲ್ಲ. ಅಲ್ಲಾಹನು ತೋರಿಸಿದ ಸರಿಯಾದ ಮಾರ್ಗ ನಿಗದಿ ಮಾಡಿದ್ದು ಅದು ಜೀವಂತರ ಮಾರ್ಗವಾಗಿದೆ ಹೊರತು ಮೃತರ ಮಾರ್ಗವಲ್ಲ. ಆದ್ದರಿಂದ ದೇವನನ್ನು ಪಡೆಯ ಬಯಸುವಿರಾದರೆ ಜೀವಂತನಾದ ಮತ್ತು ಶಾಶ್ವತವಾಗಿ ನೆಲೆನಿಲ್ಲುವವನಾದ ದೇವನನ್ನು ಸಂಪರ್ಕಿಸಿರಿ. ಏಕೆಂದರೆ ನಮ್ಮ ದೇವನು ಜೀವಂತ ದೇವನೇ ಹೊರತು ಮೃತನಲ್ಲ. ಯಾರ ದೇವನು ಮೃತನಾಗಿದ್ದಾನೆ ಮತ್ತು ಯಾರ ಪುಸ್ತಕ ಮೃತವಾಗಿದೆ. ಅವರು ಸತ್ತವರ ಮೊರೆ ಹೋದರೆ ಆಶ್ಚರ್ಯವೇನಿಲ್ಲ. ಆದರೆ ಓರ್ವ ನಿಜವಾದ ಮುಸಲ್ಮಾನನ ದೇವನು ಜೀವಂತನಾಗಿದ್ದಾನೆ, ಅವನ ನಬಿ ಜೀವಂತ ನಬಿ, ಅವರ ಪುಸ್ತಕ ಜೀವಂತ ಪುಸ್ತಕ ಮತ್ತು ಅವರ ಧರ್ಮದಲ್ಲಿ ಸದಾ ಜೀವಂತರ ಸರಣಿ ಜಾರಿಯಲ್ಲಿದೆ ಮತ್ತು ಸರ್ವಕಾಲಗಳಲ್ಲಿ ಒಬ್ಬ ಜೀವಂತ ಮನುಷ್ಯನು, ದೇವನ ಮೇಲೆ ಜೀವಂತ ವಿಶ್ವಾಸ ಮಾಡುವವನು ಬರುತ್ತಾನೆ. ಅವರು ಏನಾದರೂ ಜೀವಂತರನ್ನು ಬಿಟ್ಟು ನಶ್ವರ ಎಲುಬುಗಳ ಮತ್ತು ಗೋರಿಗಳ ಹಿಂದೆ ತಿರುಗಾಡುವುದಾದರೆ ಅದು ಅಚ್ಚರಿಯ ಮಾತಾಗಿದೆ !!!.

### ಜೀವಂತರ ಸಹವಾಸದಲ್ಲಿರಿ

ನೀವು ಜೀವಂತರ ಸಹವಾಸವನ್ನು ಬಯಸಿರಿ ಮತ್ತು ಅವರ ಸಹವಾಸ ಪಡೆಯಿರಿ. ಹೌದು, ಒಂದೆರಡು ಸಲದ ಭೇಟಿಯಲ್ಲಿ ಏನೂ ಪ್ರಭಾವ ಕಂಡು ಬರುವುದಿಲ್ಲ. ಬರಬರುತ್ತಾ ಬಯಕೆ ಈಡೇರುತ್ತದೆ. ಇದು ದೇವ ನಿಯಮವಾಗಿದೆ. ಉದಾಹರಣೆಗೆ ಹಝುರತ್ ಪೈಗಂಬರ್(ಸ) ಅವರ ಸಂಘಟನೆಯ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لا إله إلا الله محمد رسول الله

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

—(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಇತ್ತೀಚಿನ ದಿನಗಳಲ್ಲಿ ಆಂಧ್ರಪ್ರದೇಶದ ವಕ್ಫ್ ಬೋರ್ಡ್ ಅಹ್ಮದಿಯರು ಮುಸ್ಲಿಮರಲ್ಲ ಎಂದು ಹೇಳಿಕೆ ನೀಡಿದ್ದು, ಅಲ್ಲದೇ ಅಹ್ಮದಿಯ ಮುಸ್ಲಿಮ್ ಜಮಾಅತನ್ನು ಮುಸ್ಲಿಮೇತರರು ಎಂದು ಘೋಷಿಸಲಾಗಿದೆ. ಅದಕ್ಕೆ ಕೇಂದ್ರ ಅಲ್ಪಸಂಖ್ಯಾತ ಕಲ್ಯಾಣ ಖಾತೆಯ ಸಚಿವೆ ಸ್ಮೃತಿ ಇರಾನಿ 26 ಜುಲೈ 2023 ಬುಧವಾರ ಆಂಧ್ರ ವಖ್ಫ್ ಬೋರ್ಡ್‌ನ ಈ ನಿಲುವನ್ನು ತಪ್ಪೆಂದು ಸಾರುತ್ತಾ ಯಾವುದೇ ರಾಜ್ಯದ ವಖ್ಫ್ ಬೋರ್ಡ್‌ಗೆ ಯಾವುದೇ ವ್ಯಕ್ತಿ ಅಥವಾ ಸಮುದಾಯವನ್ನು ಧರ್ಮದಿಂದ ಹೊರಗಿಡುವ ಅಧಿಕಾರವಿಲ್ಲ. ಎಲ್ಲಾ ವಕ್ಫ್ ಮಂಡಳಿಗಳು ಸಂಸತ್ತು ಜಾರಿಗೊಳಿಸಿದ ಕಾಯಿದೆಗಳ ಮೂಲಕ ಆಡಳಿತ ನಡೆಸುತ್ತಿವೆ ಎಂದು ಅವರು ಹೇಳಿದರು. ಯಾವುದೇ ವಕ್ಫ್ ಬೋರ್ಡ್ ದೇಶದ ಸಂಸತ್ತಿನ ಘನತೆಗೆ ಧಕ್ಕೆ ತರಲು ಸಾಧ್ಯವಿಲ್ಲ ಮತ್ತು ಸಂಸತ್ತಿನಲ್ಲಿ ಮಾಡಿದ ಕಾನೂನುಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳಲು ಸಾಧ್ಯವಿಲ್ಲ. ಹೊರಡಿಸಿದ ಫತ್ವಾಗಳನ್ನು ಸರ್ಕಾರಿ ಆದೇಶಗಳಾಗಿ ಪರಿವರ್ತಿಸಲು ವಕ್ಫ್ ಮಂಡಳಿಗೆ ಅವಕಾಶ ನೀಡಲಾಗುವುದಿಲ್ಲ ಎಂದು ಅವರು ಹೇಳಿದರು. ನಾವು ಈ ವಿಷಯ ಕುರಿತು ಆಂಧ್ರಪ್ರದೇಶದ ಮುಖ್ಯ ಕಾರ್ಯದರ್ಶಿಯಿಂದ ಉತ್ತರ ಕೇಳಿದ್ದೇವೆ.

ಸ್ಮೃತಿ ಇರಾನಿಯವರ ಈ ಹೇಳಿಕೆಗೆ ಮುಸ್ಲಿಂ ವಿದ್ವಾಂಸರ ಸಂಘಟನೆ ಮತ್ತು ಪತ್ರಿಕೆಗಳು ಬೇಸರ ವ್ಯಕ್ತಪಡಿಸಿ ಸ್ಮೃತಿ ಇರಾನಿ ಹೇಳಿಕೆಯನ್ನು ಸುಳ್ಳು ಮಾಡಿ, ವಕ್ಫ್ ಮಂಡಳಿಯ ಹೇಳಿಕೆ ಸರಿ ಮತ್ತು ನ್ಯಾಯಸಮ್ಮತ ಮತ್ತು ಅಹ್ಮದಿಯಾ ಜಮಾಅತ್ ಅವಿಶ್ವಾಸಿಗಳು, ಮುಸ್ಲಿಮೇತರರು ಎಂದು ಘೋಷಿಸಿ ಎಂಬ ಅಸಮಂಜಸ ವಾದಗಳನ್ನು ನೀಡಲಾಯಿತು. ಅಷ್ಟೇ ಅಲ್ಲ ಜಮಾಅತ್ ವಿರುದ್ಧ ಕೆಲವು ಸುಳ್ಳು ಮತ್ತು ಅನಗತ್ಯ ಹಾಗೂ ಆಧಾರರಹಿತ ಆರೋಪಗಳನ್ನು ಕೂಡ ಮಾಡಲಾಗಿದೆ. ಇನ್‌ಶಾಅಲ್ಲಾಹ್ (ದೇವರು ಇಚ್ಛಿಸಿದರೆ) ನಾವು ಅವರ ಈ ಅನಗತ್ಯ ಹಾಗೂ ಆಧಾರರಹಿತ, ಸುಳ್ಳು ಆರೋಪಗಳಿಗೆ ತಕ್ಕುದಾದ ಉತ್ತರ ನೀಡುವೆವು.

ಜಮೀಅತ್ ಉಲೇಮಾ ಹಿಂದ್ ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿದ್ದು, ಅಹ್ಮದಿಯಾ ಜಮಾಅತನ್ನು ಮುಸ್ಲಿಮೇತರರೆಂದು ಘೋಷಿಸಿರುವ ವಕ್ಫ್ ಬೋರ್ಡ್ ಆಂಧ್ರಪ್ರದೇಶದ ನಿಲುವು ಸರಿಯಾಗಿದೆ. ಈ ವಿಷಯದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ತರ್ಕ ಅನಗತ್ಯ ಹಾಗೂ ಅಸಂಬದ್ಧ ಎಂದು ಬರೆದಿದ್ದೆ. ಜಮೀಅತ್ ಉಲೇಮಾ ಹಿಂದ್ ಅಹ್ಮದಿಯಾ ಜಮಾಅತನ್ನು ಅಮುಸ್ಲಿಂ ಎಂದು ಘೋಷಿಸುವ ಬಗ್ಗೆ ನೀಡಿದ ವಾದಗಳನ್ನು ನಾವು ಈ ಕೆಳಗೆ ಉಲ್ಲೇಖಿಸುತ್ತೇವೆ.

ಇಸ್ಲಾಂ ಎರಡು ಪ್ರಮುಖ ನಂಬಿಕೆಗಳನ್ನು ಆಧರಿಸಿದೆ. (1) ತೌಹೀದ್ ಎಂದರೆ ಅಲ್ಲಾಹನು ಅವನ ಗುಣಗಳಲ್ಲಿ ಒಬ್ಬನೆಂದು ನಂಬುವುದು ಮತ್ತು ಅವನೊಂದಿಗೆ ಯಾರನ್ನು ಸಹ ಸಹಭಾಗಿ ಮಾಡಬಾರದು. (2) ಸಂದೇಶವಾಹಕತ್ವ ಎಂದರೆ ಹಝ್ರತ್ ಮುಹಮ್ಮದ್(ಸ) ದೇವರ ಸಂದೇಶವಾಹಕ ಮತ್ತು ಕೊನೆಯ ಪ್ರವಾದಿಯಾಗಿದ್ದಾರೆ. ಪ್ರವಾದಿತ್ವ ಸರಪಳಿಯು ಅವರ ಮೇಲೆ ಕೊನೆಗೊಂಡಿದೆ. ಅವರ ಮೇಲೆ ಅವತರಿಸಿದ ಧರ್ಮ ಸಂಹಿತೆ (ಶರೀಅತ್ ಕೊನೆಯದ್ದು ಮತ್ತು ಪರಿಪೂರ್ಣವಾಗಿದೆ. ಈ ಇಸ್ಲಾಮಿಕ್ ನಂಬಿಕೆಗಳಿಗೆ ವಿರುದ್ಧವಾಗಿ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಪ್ರವಾದಿತ್ವದ ಅಂತ್ಯದ ನಂಬಿಕೆಗೆ ಸಂಪೂರ್ಣವಾಗಿ ವಿರುದ್ಧವಾದ ನಿಲುವನ್ನು ತೆಗೆದುಕೊಂಡರು. ಈ ಸೈದ್ಧಾಂತಿಕ ಮತ್ತು ನೈಜ ವ್ಯತ್ಯಾಸದ ಉಪಸ್ಥಿತಿಯಲ್ಲಿ ಖಾದಿಯಾನಿ ಅವರನ್ನು ಇಸ್ಲಾಮಿಕ್ ಪಂಥವೆಂದು ಪರಿಗಣಿಸಲು ಯಾವುದೇ ಆಧಾರವಿಲ್ಲ. ಅಂತೆಯೇ ಇಸ್ಲಾಮಿಕ ಉಮ್ಮದ ಎಲ್ಲಾ ಚಿಂತನೆಯ ಶಾಲೆಗಳು ಈ ಪಂಥವು ಮುಸ್ಲಿಮೇತರು ಎಂದು ಒಪ್ಪಿಕೊಂಡಿವೆ.

ಈ ನಿಟ್ಟಿನಲ್ಲಿ ಸುಪ್ರಸಿದ್ಧ ಸಂಸ್ಥೆ "ರಾಬ್ತಾ ಆಲಮಿ ಇಸ್ಲಾಮಿಕ್ ಏಪ್ರಿಲ್ 6, 1974 ರಂದು ನೂರಾಹತ್ತು ದೇಶಗಳ ಮುಸ್ಲಿಂ ಸಂಘಟನೆಗಳ ಪ್ರತಿನಿಧಿಗಳ ಒಮ್ಮತದ ಸಭೆಯಲ್ಲಿ ಖಾದಿಯಾನಿಗಳ ಪ್ರಸ್ತಾಪವನ್ನು ಮನ್ನಿಸುತ್ತಾ ಈ ಪಂಥವು ಇಸ್ಲಾಮಿನಿಂದ ಹೊರತಾದದ್ದು ಮತ್ತು ಮುಸ್ಲಿಮರ ಶತ್ರುವಾಗಿದೆ ಎಂದು ಘೋಷಿಸಿತು. ಎಂದರೆ ಜಮೀಅತ್ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಮುಸ್ಲಿಮೇತರೆಂದು ಘೋಷಿಸಲು ನೀಡಿರುವ ಕಾರಣಗಳು ಇಂತಿವೆ.

* ಅಹ್ಮದಿಯಾ ಮುಸ್ಲಿಂ ಜಮಾಅತ್ ಅಲ್ಲಾಹನ ಏಕತ್ವ (ತೌಹೀದ್) ಮೇಲೆ ನಂಬಿಕೆ ಇಡುವುದಿಲ್ಲ ಮತ್ತು ಅವನನ್ನು ಗುಣಗಳಲ್ಲಿ ಒಬ್ಬನೇ ಎಂದು ನಂಬುವುದಿಲ್ಲ.

* ಅಹ್ಮದಿಯಾ ಮುಸ್ಲಿಂ ಜಮಾಅತ್ ಹಝ್ರತ್ ಪೈಗಂಬರ್ (ಸ) ಅವರನ್ನು ಅಂತಿಮ ಪ್ರವಾದಿ ಎಂದು ನಂಬುವುದಿಲ್ಲ.

* ಹಝ್ರತ್ ಪೈಗಂಬರ್(ಸ) ರವರ ಮೇಲೆ ಪ್ರವಾದಿತ್ವಕ್ಕೆ ಸಂಬಂಧಿಸಿದ ದಿವ್ಯವಾಣಿ (ವಹಿ) ಕೊನೆಗೊಂಡಿದೆ ಎಂದು ನಂಬುವುದಿಲ್ಲ ಮತ್ತು ಅವರ(ಸ) ಧರ್ಮ ಸಂಹಿತೆ (ಶರೀಅತ್) ಅನ್ನು ಅಂತಿಮವಾದುದು ಹಾಗೂ ಪರಿಪೂರ್ಣವಾದುದು ಎಂದು ನಂಬುವುದಿಲ್ಲ.

* ಮುಸ್ಲಿಂ ಉಮ್ಮಾದ ಎಲ್ಲಾ ಚಿಂತನ ಶಾಲೆಗಳು ಈ ಪಂಥದವರು ಅಮುಸ್ಲಿಮರು ಎಂಬ ನಿಲುವಿಗೆ ಒಮ್ಮತ ಹೊಂದಿದ್ದಾರೆ.

* ರಾಬ್ತ ಆಲಮೆ ಇಸ್ಲಾಮಿ, ಈ ಪಂಥವು ಇಸ್ಲಾಮಿನಿಂದ ಹೊರತಾದದ್ದು ಮತ್ತು ಮುಸ್ಲಿಂ ವಿರೋಧಿ ಎಂದು ಘೋಷಿಸಿತ್ತು.

ಅಲ್ಲಾಹನ ಏಕತ್ವ (ತೌಹೀದ್) ಮತ್ತು ಅವನ ಗುಣಗಳಲ್ಲಿ ಒಬ್ಬನೇ ಎಂಬ ಕುರಿತು ಹಾಗೂ ಹಝ್ರತ್ ಪೈಗಂಬರ್(ಸ) ರವರ ಕುರಿತು ಜಮಾಅತ್ ಅಹ್ಮದಿಯಾ ಮುಸ್ಲಿಂ ಜಮಾಅತ್ ಬಗ್ಗೆ ಹೇಳಿರುವ ಮಾತುಗಳು ಸುಳ್ಳಿನ ಮಂಟಪ ಹೊರತು ಇನ್ನೇನಲ್ಲ. ನಾವು ಇವೆಲ್ಲ ಆಕ್ಷೇಪಣೆಗಳಿಗೆ, ಆರೋಪಗಳಿಗೆ ಸವಿವರವಾದ ಉತ್ತರ ಕೊಡುವೆವು. ಮೇಲಾಗಿ ಕೇವಲ ಇಷ್ಟು ಹೇಳಬಯಸುವೆವು. ಅಹ್ಮದಿಯಾ ಮುಸ್ಲಿಂ ಜಮಾಅತ್ ಅಲ್ಲಾಹನ ಏಕತ್ವ (ತೌಹೀದ್) ಮತ್ತು ಗುಣಗಳಲ್ಲಿ ಒಬ್ಬನೇ ಎನ್ನುವ ನಿಲುವಿನಲ್ಲಿ ಸಂಪೂರ್ಣ ನಂಬಿಕೆ ಹೊಂದಿದೆ. ಹಝ್ರತ್ ಪೈಗಂಬರ್(ಸ) ಅವರನ್ನು ಮನಪೂರ್ವಕವಾಗಿ ಖಾತಮನ್ನಿಬಿಯೀನ್ ಎಂದು ನಂಬುತ್ತದೆ. ಹೌದು ಅಲ್ಲಾಹನ ಗುಣಗಳಲ್ಲಿ ಇಡಬೇಕಾದ ರೀತಿಯಲ್ಲಿ ನಂಬಿಕೆ ಇಲ್ಲದವರು ಯಾರಾದರಿದ್ದರೆ ಅದು ಜಮೀಅತ್ತಿನ ವಿದ್ವಾಂಸರು ಮತ್ತು ಇತರ ವಿದ್ವಾಂಸರಾಗಿದ್ದಾರೆ. ಹಝ್ರತ್ ಪೈಗಂಬರ್ (ಸ) ರವರನ್ನು ಯಾರಾದರೂ ಖಾತಮನ್ನಬಿಯೀನ್ ಎಂದು ನಂಬುವವರಿದ್ದರೆ ಅದು ಸಹ ಜಮೀಅತ್ ಮತ್ತು ಅವರ ಸಹಗುಂಪುಗಳ ವಿದ್ವಾಂಸರಾಗಿದ್ದಾರೆ. ಈ ಮಾತುಗಳನ್ನು ನಾವು ಸಾಕ್ಷ್ಯಗಳೊಂದಿಗೆ ಇನ್‌ಶಾಅಲ್ಲಾಹ್ ಸಾಬೀತುಗೊಳಿಸುವೆವು.

ಹಾಗೆಯೇ ಮುನ್ಸಿಫ್ ಹೈದರಾಬಾದ್ ದಿನಪತ್ರಿಕೆ ಎಂತೂ ಮನನೋಯಿಸುವುದರಲ್ಲಿ ಮತ್ತು ಸುಳ್ಳು ಹೇಳುವುದರಲ್ಲಿ ಜಮೀಅತ್‌ನಿಂದಲೂ ಒಂದು ಹೆಜ್ಜೆ ಮುಂದೆಯೇ ಸಾಗಿದೆ. ಅದು ತನ್ನ 25 ಜುಲೈಯ ಸಂಚಿಕೆಯಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮೇಲೆ ಕೆಲವು ಅತ್ಯಂತ ಸುಳ್ಳು ಆರೋಪಗಳನ್ನು ಮಾಡಿದೆ. ಮುನ್ಸಿಫ್‌ನ ಆ ವಿಷಯ ಇದೇ ಪುಟದಲ್ಲಿ ನೋಡಬಹುದಾಗಿದೆ.

ಮುನ್ಸಿಫ್‌ನ ಕೆಲವು ಆರೋಪಗಳನ್ನು ನಾವು ಕೆಳಗೆ ನಮೂದಿಸುತ್ತೇವೆ. ಇನ್‌ಶಾಅಲ್ಲಾಹ್ ಅದರ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ನೀಡುವೆವು. ಮುನ್ಸಿಫ್ ಬರೆಯುತ್ತದೆ.

* ಜಮೀಅತ್ ಉಲಮಾ ಹಿಂದ್, ಜಮಾಅತ್ ಇಸ್ಲಾಮಿ, ಜಮೀಅತ್ ಅಹ್ಲೆ ಹದೀಸ್, ಸುನ್ನಿ ಉಲಮಾ ಕೌನ್ಸಿಲ್, ವಿಶೇಷವಾಗಿ ಮುಸ್ಲಿಂ ಪರ್ಸನಲ್ ಲಾ ಬೋರ್ಡ್‌ನ ಜವಾಬ್ಧಾರಿಯಾಗಿರುತ್ತದೆ. ಅವರು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮತ್ತು ಅವರ ಅನುಯಾಯಿಗಳು ಹೊಂದಿರುವ ಇತರ ಧರ್ಮಗಳ ಬಗ್ಗೆಯ ಅವರ ನಂಬಿಕೆಗಳು ಮತ್ತು ಪೂರ್ವದಲ್ಲಿ ಬ್ರಿಟಿಷರೊಂದಿಗೆ ಸೇರಿ ಮಾಡಿದ ಸಂಚುಗಳ ಬಗ್ಗೆ ವಿವರ ನೀಡಬೇಕು.

* ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸ್, ಮಹದಿ, ಮಸೀಲ್ ಮಸೀಹ್ (ಸಾದೃಶ್ಯ ಮಸೀಹ್) ವಾಗ್ದತ್ತ ಮಸೀಹ, ಪ್ರವಾದಿತ್ವ ನೆರಳು ಹೊಂದಿದ ಪ್ರವಾದಿ, ಸಾದೃಶ್ಯ ಪ್ರವಾದಿ, ಯಥಾರ್ಥ ಪ್ರವಾದಿ, ಮುಹಮ್ಮದ್(ಸ) ರವರ ಪ್ರತಿರೂಪ ಅಲ್ಲದೇ ದೇವನೆಂಬ ವಾದವು ಸಾರಿದ್ದಾರೆ.

* ಸ್ವಯಂ ಖಾದಿಯಾನಿ ಮುಸ್ಲಿಮರಾದ ನಮ್ಮನ್ನು ಮುಸ್ಲಿಮರೆಂದು ನಂಬುವುದಿಲ್ಲ ಎಂದರೆ ಅವರ ದೃಷ್ಟಿಯಲ್ಲಿ ನಾವು ಅಮುಸ್ಲಿಮರು (ಕಾಫಿರ್) ಎಂದಾಗಿದ್ದೇವೆ.

* ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ತಮ್ಮ ಗ್ರಂಥ ತಝ್‌ಕಿರಹ್‌ದ ಪುಟ 519 ರಲಿ ಈ ಫತ್ವಾ ಹೊರಡಿಸುತ್ತಾರೆ. ಅಲ್ಲಾಹನು

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಸಂದೇಶವಾಹಕರ(ಸ) ಬೋಧನೆಗಳನ್ನು ಅನುಸರಿಸುತ್ತ ಕಠಿಣ ಪರಿಶ್ರಮ, ಉತ್ತಮ ಸ್ವಭಾವಗುಣಗಳಿಂದ ಮತ್ತು ಪ್ರಾರ್ಥನೆಗಳಿಂದ, ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಪ್ರತಿಯೊಬ್ಬ ಮೇಲ್ವಿಚಾರಕನು ತನ್ನ ಕರ್ತವ್ಯವನ್ನು ನಿರ್ವಹಿಸಬೇಕು.

ಈ ಜಲ್ಸ ಯಾವುದೇ ಲೌಕಿಕ ಮೇಳವಲ್ಲ ಎಂಬ ಹಝ್ರತ್ ಮಸೀಹ್ ಮೌಊದ್(ಅ)ರ ಮುಖ್ಯವಾದ ಮಾತನ್ನು ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಸದಾ ನೆನಪಿನಲ್ಲಿಡಬೇಕು.

ಒಬ್ಬನು ತನ್ನ ಸುಖಕ್ಕಿಂತ ತನ್ನ ಸಹೋದರನ ಸುಖಕ್ಕೆ ಆದ್ಯತೆ ನೀಡುವ ತನಕ ಅವನ ವಿಶ್ವಾಸ ಖಂಡಿತವಾಗಿಯೂ ಸರಿಯಾಗಲಾರದು ಎಂದು ನಾನು ಸತ್ಯವಾಗಿ ಹೇಳುತ್ತೇನೆ. (ಹಝ್ರತ್ ಮಸೀಹ್ ಮೌಊದ್(ಅ))

ಉನ್ನತ ನೈತಿಕತೆಯನ್ನು ತೋರಿಸುವುದು, ಉತ್ತಮ ನಡವಳಿಕೆಯನ್ನು ತೋರಿಸುವುದು, ಒಬ್ಬರನ್ನೊಬ್ಬರು ನಗುಮೊಗದಿಂದ ಭೇಟಿಯಾಗುವುದು, ಇತರರಿಗಾಗಿ ತ್ಯಾಗ ಮಾಡುವ ಮನೋಭಾವವನ್ನು ಹೊಂದಿರುವುದು ಕಾರ್ಯಕರ್ತರ ಕೆಲಸ ಮಾತ್ರವಲ್ಲ, ಅತಿಥಿಗಳು ಸಹ ಈ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು.

ಈ ಜಲ್ಸದಲ್ಲಿ ಭಾಗಿಯಾಗಲು ನಮಗೆ ಒಂದು ಉದ್ದೇಶವಿದೆ. ಆ ಉದ್ದೇಶವೇನೆಂದರೆ, ನಾವು ನಮ್ಮ ಜ್ಞಾನಪರವಾದ, ಆಧ್ಯಾತ್ಮಿಕವಾದ ಮತ್ತು ನೈತಿಕವಾದ ಸ್ಥಿತಿಗಳನ್ನು ಉತ್ತಮಗೊಳಿಸಬೇಕು ಹಾಗೂ ಅಲ್ಲಾಹ್ ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಪ್ರೀತಿಯನ್ನು ಉಂಟುಮಾಡಬೇಕು ಎಂದಾಗಿದೆ.

ಹೃದಯದಲ್ಲಿ ಮೃದುಭಾವನೆ ತಲೆದೋರುವ ತನಕ ಯಾರೂ ಸತ್ಯಸಂಧ ಸತ್ಯವಿಶ್ವಾಸಿ ಆಗಲಾರ. ಸತ್ಯವಿಶ್ವಾಸಿ ತನ್ನನ್ನು ಕೀಳೆಂದು ಭಾವಿಸಬೇಕು. ಎಲ್ಲ ರೀತಿಗಳ ಅಹಂಭಾವ ತ್ಯಜಿಸಬೇಕು. ಕೋಮಿನ ಸೇವಕನಾಗುವುದು ಅದರ ನಾಯಕನಾಗುವ ಚಿಹ್ನೆಯಾಗಿದೆ. (ಹಝ್ರತ್ ಮಸೀಹ್ ಮೌಊದ್(ಅ))

ಈ ಮೂರು ದಿನಗಳು ಕೇವಲ ಗೀತೆಗಳು ಮತು ಪದ್ಯಗಳನ್ನು ಹಾಡುವ ಹಾಗೂ ಪ್ರೀತಿ ಮತ್ತು ಪ್ರೇಮದ ಕವಿತೆಗಳನ್ನು ಹಾಡುವ ದಿನಗಳು ಮಾತ್ರವಾಗದಿರಲಿ. ಈ ಮೂರು ದಿನಗಳಿಂದ ಎಂತಹ ಕಿಡಿ ಉಂಟಾಗಲಿ ಎಂದರೆ, ನಿಜವಾದ ಸಮಾಜದ ವೈಶಿಷ್ಟ್ಯವಾದ ಪ್ರೀತಿ ಮತ್ತು ಪ್ರೇಮದ ವಾತಾವರಣ ಸ್ಥಾಪಿಸುವಂತಾಗಲಿ.

ಅಲ್ಲಾಹನ ಸಂಪ್ರೀತಿಗಾಗಿ ಈ ದಿನಗಳು ಕಳೆದರೆ ಮತ್ತು ಸಂತೋಷದಿಂದ ಸಹಿಸಿದರೆ ಅಲ್ಲಾಹನು ಬೇರೆ ಯಾವುದಾದರೂ ಮಾರ್ಗದಿಂದ ದಯಪಾಲಿಸುತ್ತಾನೆ.

ಬಡವರು ಬಡವರಾಗುತ್ತಿರುವ ಕಾರಣ ಜಗತ್ತಿನಲ್ಲಿ ಬಹಳಷ್ಟು ಅವ್ಯವಸ್ಥೆಗಳಿವೆ. ಇಂದಿಗೂ ಎರಡು ಹೊತ್ತಿನ ಊಟವೂ ಸಿಗದ ಲಕ್ಷಾಂತರ ಜನರಿದ್ದಾರೆ. ರೊಟ್ಟಿ ತಿಂದರೆ ವಾಸತಿ ಇಲ್ಲ. ಶ್ರೀಮಂತ ದೇಶಗಳೆಂದು ಕರೆಯಲ್ಪಡುವ ಈ ದೇಶಗಳಲ್ಲಿಯೂ ಸಹ ಅಂತಹ ವಿಷಯಗಳಿವೆ,

ಈ ಜಲ್ಸದಲ್ಲೂ ಇಂತಹವರು ತಮ್ಮ ದ್ವೇಷವನ್ನು ದೂರ ಮಾಡುವ ಮೂಲಕ ಭದ್ರತೆಯ ಸಂದೇಶವನ್ನು ಸಾರಲು ಪ್ರಯತ್ನಿಸಬೇಕು ಮತ್ತು ಸಾಮಾನ್ಯ ಪರಿಸರದಲ್ಲಿ ಭದ್ರತೆಯ ಸಂದೇಶವನ್ನು ನೀಡುವುದನ್ನು ಮುಂದುವರಿಸಬೇಕು.

ಭದ್ರತೆಯ ವಿಷಯದಲ್ಲಿ, ಪುರುಷರು ಮತ್ತು ಮಹಿಳೆಯರು ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರು ತಮ್ಮ ಪರಿಸರದ ಮೇಲೆ ಕಣ್ಣಿಡಬೇಕು. ಇದು ಉತ್ತಮ ಭದ್ರತಾ ಸಾಧನವಾಗಿದೆ.

ಅಲ್ಲಾಹನು ಎಲ್ಲ ತೊಂದರೆಗಳಿಂದ ಸಂರಕ್ಷಿಸಲಿ. ತನ್ನ ಕೃಪೆ ಮತ್ತು ಕಾರುಣ್ಯದ ಮಳೆ ವರ್ಷಿಸುತ್ತಾ ಇರಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **21–07–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಯು.ಕೆ.ಯ ವಾರ್ಷಿಕ ಜಲ್ಸ ಆರಂಭವಾಗುತ್ತಿದೆ.

ಇಲ್ಲಿ ಖಿಲಾಫತಿನ ಇರುವಿಕೆಯಲ್ಲಿ ಸುಮಾರು ದಶಕಗಳಿಂದ ಜಲ್ಸ ಸಾಲಾನ ನಡೆಯುತ್ತಾ ಇವೆ. ಆರಂಭದಲ್ಲಿ ವಿಸ್ತಾರವಾದ ಏರ್ಪಾಡುಗಳನ್ನು ಮಾಡಬೇಕಾದ ಕಾರಣದಿಂದ ಇಲ್ಲಿಯ ಜಮಾಅತಿಗೆ ಬಹಳಷ್ಟು ಕಲಿಯುವ ಆವಶ್ಯಕತೆ ಇತ್ತು. ಅದಕ್ಕಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ಸ್ವತಃ ಆಸಕ್ತಿಯಿಂದ ಮಾರ್ಗದರ್ಶನ ಮಾಡಿದರು ಮತ್ತು ರಬ್ವದಿಂದಲೂ ಜನರನ್ನು ಕರೆದುಕೊಂಡು ಕೆಲಸಗಳನ್ನು ಕಲಿಸಿದರು. ರಬ್ವದಿಂದ ಬಂದವರಲ್ಲಿ ಜಲ್ಸ ಸಾಲಾನ ಆಫೀಸರ್ ಆದ ಸನ್ಮಾನ್ಯ ಚೌಧರಿ ಹಮೀದುಲ್ಲಾಹ್ ಸಾಹಿಬ್ ಕೂಡ ಇದ್ದರು. ಅವರು ಬಹಳಷ್ಟು ನೆರವನ್ನು ಮಾಡಿದರು.

1985ರಲ್ಲಿ ಖಿಲಾಫತಿನ ಅಧೀನದಲ್ಲಿ ಮೊದಲ ಜಲ್ಸ ನಡೆಯಿತು. ಅದಕ್ಕಿಂತ ಮೊದಲು 1984ರಲ್ಲೂ ಇಲ್ಲಿ ಜಲ್ಸ ನಡೆದಿತ್ತಾದರೂ ಅದು ಬಹಳ ಕಿರಿದಾಗಿತ್ತು.

1985ರಲ್ಲಿ ಬಹುಶಃ ಐದು ಸಾವಿರ ಜನರು ಭಾಗವಹಿಸಿದ್ದರು. ಈ ಎಲ್ಲ ಏರ್ಪಾಡನ್ನು ಹೇಗೆ ನಿರ್ವಹಿಸುವುದು ಎಂದು ವ್ಯವಸ್ಥಾಪಕರಿಗೆ ಅಂದು ಚಿಂತೆಯಿತ್ತು. ಈಗಂತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ

ಅಥವಾ ಲಜ್ನಾ ಇಮಾಅಲ್ಲಾಹ್ ಶಾಖಾ ಸಂಘಟನೆಗಳ ಇಜ್ತಿಮಗಳಲ್ಲಿ ಅದಕ್ಕಿಂತ ಅನೇಕ ಪಟ್ಟು ಹಾಜರಿ ಇರುತ್ತದೆ ಮತ್ತು ಶಾಖಾ ಸಂಘಟನೆಗಳು ಬಹಳ ಉತ್ತಮ ರೀತಿಯಲ್ಲಿ ಎಲ್ಲ ಏರ್ಪಾಡನ್ನು ಸ್ವತಃ ನಿರ್ವಹಿಸುತ್ತಿವೆ. ಈ ಮಟ್ಟದಲ್ಲಿ ಈಗ ಯು.ಕೆ.ಯ ಜಮಾಅತ್ ಬಹಳಷ್ಟು ಅನುಭವ ಪಡೆದುಕೊಂಡಿದೆ.

ಆದರೂ ಈಗ ಮೂರು ವರ್ಷಗಳ ನಂತರ ಪೂರ್ಣ ಪ್ರಮಾಣದಲ್ಲಿ ಜಲ್ಸ ಪುನಃ ಜರುಗುತ್ತಿರುವ ಕಾರಣದಿಂದ ನಲ್ವತ್ತು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಬಹುದಾದ ಜನರನ್ನು ಹೇಗೆ ಉತ್ತಮ ರೀತಿಯಲ್ಲಿ ನಿಭಾಯಿಸುವುದು ಎಂಬುದರ ಬಗ್ಗೆ ವ್ಯವಸ್ಥಾಪಕರು ಸ್ವಲ್ಪ ಚಿಂತಿತರಾಗಿರುವರು. ಆದರೆ ಅಲ್ಲಾಹನ ಅನುಗ್ರಹದಿಂದ ಇಲ್ಲಿಯ ಕಾರ್ಯಕರ್ತರು ಬಹಳ ಉತ್ತಮ ರೀತಿಯಲ್ಲಿ ಎಲ್ಲ ಏರ್ಪಾಡುಗಳನ್ನು ನಿರ್ವಹಿಸುವರು ಎಂಬ ಪ್ರತೀಕ್ಷೆ ನನಗೆ ಇದೆ.

ಮಾಶಾಅಲ್ಲಾಹ್, ಇಲ್ಲಿ ವಾಸಿಸುವ ಜನರಷ್ಟೇ ಅಲ್ಲ, ಇಲ್ಲಿಯೇ ಹುಟ್ಟಿ ಬೆಳೆದ ಮಕ್ಕಳು ಈಗ ಯುವಕರಾಗಿದ್ದಾರೆ. ಅವರು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲು ಸಾಕಷ್ಟು ಅನುಭವವನ್ನು ಹೊಂದಿದ್ದಾರೆ.

ಕಳೆದ ರವಿವಾರ ನಾನು ಅಂದಿನ ವರೆಗಿನ ಕೆಲಸಗಳ ಅವಲೋಕನ ನಡೆಸಿದ್ದೆ. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ವಿಭಾಗದಲ್ಲೂ ಕಾರ್ಯಕರ್ತರು ಬಹಳ ಕ್ರಿಯಾಶೀಲರಾಗಿ ಮತ್ತು ಕೆಲಸಗಳನ್ನು ಚೆನ್ನಾಗಿ ಅರಿಯುವವರನ್ನಾಗಿ ನಾನು ಕಂಡೆನು. ಆ ಸಮಯದಲ್ಲಿ ಇದ್ದ ಚಿಂತೆಗಳು ಅಲ್ಲಾಹನು ದೂರಮಾಡಿದನು.

ನಾವು ಅಲ್ಲಾಹನ ಅನುಗ್ರಹಗಳನ್ನು ಸ್ವೀಕಾರ ಮಾಡುವವರಾದರೆ ಅವನು ನಮ್ಮ ಚಿಂತೆಗಳನ್ನು ಸದಾ ದೂರ ಮಾಡುವನು. ನಮ್ಮ ಕೆಲಸಗಳು ನಮ್ಮ ಯಾವುದೇ ಚತುರತೆ ಅಥವಾ ಅನುಭವಗಳಿಂದ ಈಡೇರುವುದಿಲ್ಲ. ಬದಲಾಗಿ ಅಲ್ಲಾಹನ ಅನುಗ್ರಹದಿಂದ ಮಾತ್ರ ಈಡೇರಲ್ಪಡುತ್ತವೆ.

ಕಳೆದ ಖುತ್‌ಬ ಜುಮುಅದಲ್ಲಿ, ನಾನು ಕಾರ್ಯಕರ್ತರಿಗೆ ಸಂಕ್ಷಿಪ್ತವಾಗಿ ಹೇಳಿದ್ದೇನೆಂದರೆ, ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಸಂದೇಶವಾಹಕರ(ಸ) ಬೋಧನೆಗಳನ್ನು ಅನುಸರಿಸುತ್ತ ಕಠಿಣ ಪರಿಶ್ರಮ, ಉತ್ತಮ ಸ್ವಭಾವಗುಣಗಳಿಂದ ಮತ್ತು ಪ್ರಾರ್ಥನೆಗಳಿಂದ, ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಪ್ರತಿಯೊಬ್ಬ ಮೇಲ್ವಿಚಾರಕನು ತನ್ನ ಕರ್ತವ್ಯವನ್ನು ನಿರ್ವಹಿಸಬೇಕು. ಮತ್ತು ಹೀಗೆ ಮಾಡಿದಾಗ, ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸುವನು. ಕೇವಲ ಧಾರ್ಮಿಕ ಉದ್ದೇಶಗಳಿಗಾಗಿ ಇಲ್ಲಿ ನೆರೆದಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅತಿಥಿಗಳಿಗೆ ಸೇವೆ ಸಲ್ಲಿಸಲು ನಾವು ನಿಸ್ವಾರ್ಥವಾಗಿ ನಮ್ಮನ್ನು ಅರ್ಪಿಸಿಕೊಂಡಿದ್ದೇವೆ. ಆದ್ದರಿಂದ ಪುನಃ ನಾನು ಕಾರ್ಯಕರ್ತರೊಡನೆ ಹೇಳುತ್ತೇನೆ. ನೀವು ಎಲ್ಲರೂ ಯಾವ ಉತ್ಸಾಹದಿಂದ ಸ್ವತಃ ಈ ಸೇವೆಗಾಗಿ ತಮ್ಮನ್ನು ಅರ್ಪಿಸಿದ್ದೀರೋ ಅದೇ ಆವೇಶವನ್ನು ನೆಲೆನಿಲ್ಲಿಸುತ್ತಾ ಡ್ಯೂಟಿಗಳೂ ಇರುವಷ್ಟು ದಿನಗಳು ಈ ಸೇವೆಯನ್ನು ಮಾಡುತ್ತಿರಿ. ಅದೇ ರೀತಿಯಲ್ಲಿ ಡ್ಯೂಟಿಗಳ ಜೊತೆ ಜೊತೆಗೆ ನಾವು ಅಲ್ಲಾಹನ ಆರಾಧನೆಯ ಹಕ್ಕನ್ನು ಕೂಡ ಈಡೇರಿಸಬೇಕು ಎಂಬುದನ್ನು ಗಮನದಲ್ಲಿಡಬೇಕು. ತಮ್ಮ ನವಾಝುಗಳ ಬಗ್ಗೆ ಗಮನವಿರಬೇಕು. ಸ್ವಂತ ಆತ್ಮವನ್ನು ಪರಿಶುದ್ಧಗೊಳಿಸಲು ಪ್ರಯತ್ನಿಸಬೇಕು

ನಮ್ಮ ಕರ್ತವ್ಯಗಳನ್ನು ಪೂರೈಸುವ ಮೂಲಕ ನಾವು ನಮ್ಮ ಗುರಿಯನ್ನು ಸಾಧಿಸಿದ್ದೇವೆ ಎಂದು ಪರಿಗಣಿಸಬಾರದು. ಆರಾಧನೆ ಇಲ್ಲದೆ ನಮ್ಮ ಉದ್ದೇಶ ಈಡೇರುವುದಿಲ್ಲ. ಹಾಗಾಗಿ ಕರ್ತವ್ಯ ನಿರ್ವಹಿಸುವ ಮಕ್ಕಳು, ಯುವಕ-ಯುವತಿಯರು ಕೂಡ ಈ ಹಕ್ಕನ್ನು ಈಡೇರಿಸಲು ಕಾಳಜಿ ವಹಿಸಬೇಕು.

ಅದೇ ರೀತಿಯಲ್ಲಿ ಜಲ್ಸಗಾಗಿ ಆಗಮಿಸಿರುವ ಅತಿಥಿಗಳೊಡನೆ ಕೆಲವು ಮಾತುಗಳನ್ನು ಹೇಳಲು ಇಂದು ನಾನು ಬಯಸುತ್ತೇನೆ. ಜಲ್ಸದಲ್ಲಿ ಭಾಗವಹಿಸುವವನು ಸದಾ ನೆನಪಿನಲ್ಲಿಡಬೇಕಾದ ವಿಷಯವೇನೆಂದರೆ ನಾನು ಹೇಳುತ್ತಿರುವ ಎಲ್ಲಾ ವಿಷಯಗಳನ್ನು ನಾನು ಸಂಪ್ರದ ಪ್ರಕಾರ ಹೇಳಲಾಗುತ್ತಿದೆ ಮತ್ತು ನಾನು ಹೇಳಿದ್ದೇನೆ ಮತ್ತು ನೀವು ಕೇಳಿದ್ದೀರಿ ಇಷ್ಟು ಸಾಕು ಎಂದು ಎಂದಿಗೂ ಭಾವಿಸಬಾರದು ಬದಲಿಗೆ, ಇದನು ಕಾರ್ಯರೂಪಕ್ಕು ತರಲು ಪ್ರಯತ್ನಿಸಬೇಕು.

ಮೊತ್ತ ಮೊದಲನೆಯದಾಗಿ ಈ ಜಲ್ಸ ಯಾವುದೇ ಲೌಕಿಕ ಮೇಳವಲ್ಲ ಎಂಬ ಹಝ್ರತ್ ಮಸೀಹ್ ಮೌಊದ್(ಅ)ರ ಮುಖ್ಯವಾದ ಮಾತನ್ನು ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಸದಾ ನೆನಪಿನಲ್ಲಿಡಬೇಕು.

(ಶಹಾದತುಲ್ ಖುರ್‌ಆನ್, ರೂಹಾನಿ ಖಝಾಇನ್, ಸಂಪುಟ-6, ಪುಟ-395)

ಈ ಜಲ್ಸದಲ್ಲಿ ಭಾಗಿಯಾಗಲು ನಮಗೆ ಒಂದು ಉದ್ದೇಶವಿದೆ. ಆ ಉದ್ದೇಶವೇನೆಂದರೆ, ನಾವು ನಮ್ಮ ಜ್ಞಾನಪರವಾದ, ಆಧ್ಯಾತ್ಮಿಕವಾದ ಮತ್ತು ನೈತಿಕವಾದ ಸ್ಥಿತಿಗಳನ್ನು ಉತ್ತಮಗೊಳಿಸಬೇಕು ಹಾಗೂ ಅಲ್ಲಾಹ್ ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಪ್ರೀತಿಯನ್ನು ಉಂಟುಮಾಡಬೇಕು ಎಂದಾಗಿದೆ.

ಹೀಗಾಗಿ ಈ ಆಲೋಚನೆಯು ಸಂಭವಿಸಿದಾಗ, ಲೌಕಿಕ ವಿಷಯಗಳ ಬಗ್ಗೆ ಗಮನವನ್ನು ನೀಡಲಾಗುವುದಿಲ್ಲ ಮತ್ತು ಲೌಕಿಕ ವಿಷಯಗಳ ಬಗ್ಗೆ ಗಮನವನ್ನು ನೀಡುವುದಿಲ್ಲ ಎಂದಾದರೆ ಜಲ್ಸದ ಏರ್ಪಾಡುಗಳಲ್ಲಿ ಇರುವ ಕೆಲವು ಸಾಮಾನ್ಯ ಕೊರತೆಗಳ ಕಡೆಗೆ ನಮ್ಮ ಗಮನ ಹೋಗದು. ಮತ್ತು ಈ ಆಲೋಚನೆ ಇದ್ದರೆ ಆತಿಥೇಯರು ಅಥವಾ ಜಲ್ಸದ ಆಯೋಜಕರ ಕಡೆಯಿಂದ ಯಾವುದೇ ಕೊರತೆಯಿದ್ದರೆ, ಅದು ನಮಗೆ ಮುಖ್ಯವಲ್ಲ ಎಂದು ಭಾವಿಸಲಾಗುವುದು. ನಮ್ಮ ಮೂಲ ಉದ್ದೇಶವು ಆಧ್ಯಾತ್ಮಿಕ ಮತ್ತು ಬೌದ್ಧಿಕ ಪರಿಸ್ಥಿತಿಗಳನ್ನು ಸುಧಾರಿಸುವುದಾಗಿದೆ ಮತ್ತು ನಾವು ಜಲ್ಸದ ಎಲ್ಲಾಕಾರ್ಯಕ್ರಮಗಳು ಮತ್ತು ಭಾಷಣಗಳಿಂದ ಪ್ರಯೋಜನ ಪಡೆಯುವ ಮೂಲಕ ಆ ಉದ್ದೇಶವನ್ನು ಗಳಿಸಬಹುದು.

ಜಲ್ಸದ ಸಮಯಗಳಲ್ಲಿ ಅಲ್ಲಿಲ್ಲಿ ಸುತ್ತಾಡುವುದಕ್ಕೆ ಬದಲಾಗಿ ಜಲ್ಸದ ಕಾರ್ಯಕ್ರಮಗಳಲ್ಲಿ ಭಾಗವಹಿಸಿಕೊಂಡು ಪೂರ್ಣ ಶ್ರದ್ಧೆಯಿಂದ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಬೇಕು ಎಂಬ ಸಂಗತಿಯನ್ನು ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಖಚಿತಪಡಿಸಬೇಕು. ಕಾರ್ಯಕ್ರಮಗಳ ನಡುವೆ ಇರುವ ವಿರಾಮದ ವೇಳೆ ಲಭಿಸುವ ಸಮಯವನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿರಿ. ಮಾರುಕಟ್ಟೆಯಲ್ಲಿ ಖರೀದಿ ಮಾಡಲಿಕ್ಕಾಗಿ ಸುತ್ತಾಡಬೇಡಿರಿ. ಬದಲಾಗಿ ಪುಸ್ತಕಗಳ ಸ್ಟಾಲಿಗೆ ಹೋಗಿರಿ, ಕೇಂದ್ರದ ವಿಭಾಗಗಳು ಮುಂತಾದವರ ಪ್ರದರ್ಶನಗಳನ್ನು ನೋಡಿರಿ. ಅಂತೆಯೇ, ಮಖ್‌ಝನೆ ತಸಾವೀರ್, ರಿವೀವ್ ಆಫ್ ರಿಲೀಜಿಯನ್ಸ್, ತಬ್ಲೀಗ್ ಇತ್ಯಾದಿ ಮಾರ್ಕ್ಯೂಗಳಿವೆ, ಆರ್ಕೈವ್ಸ್ ಪ್ರದರ್ಶನದಂತಹ ವಿವಿಧ ಕೇಂದ್ರ ಇಲಾಖೆಗಳಿವೆ, ಅವುಗಳನ್ನು ಭೇಟಿ ಮಾಡಿ ಮತ್ತು ನಿಮ್ಮ ಧಾರ್ಮಿಕ ಮತ್ತು ಐತಿಹಾಸಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಿ.

ಆದುದರಿಂದ ಪ್ರತಿಯೊಂದು ವಿಷಯದಲ್ಲೂ ಲೌಕಿಕ ಜಂಜಾಟಗಳಿಂದ ಬೇರ್ಪಟ್ಟು ಸಂಪೂರ್ಣವಾಗಿ ಧಾರ್ಮಿಕ ಮತ್ತು ಶೈಕ್ಷಣಿಕ ಸುಧಾರಣೆಯನ್ನು ಮಾಡಲು ಪ್ರಯತ್ನಿಸಿ ಮತ್ತು ಇದು ಸಂಭವಿಸಿದಾಗ ಪರಸ್ಪರ ಪ್ರೀತಿ ಮತ್ತು ಸಂಬಂಧವು ಹೆಚ್ಚಾಗುತ್ತದೆ ಮತ್ತು ನಿರ್ವಹಣೆ ಮತ್ತು ಆತಿಥೇಯರಲ್ಲಿ ದೌರ್ಬಲ್ಯಗಳಿದ್ದರೆ ಅದು ಗೋಚರಿಸುವುದಿಲ್ಲ. ನಿಜವಾದ ಮುಮಿನ್‌ನ ವಾತಾವರಣವನ್ನು ಪ್ರತಿಬಿಂಬಿಸುವ ಒಂದು ಸುಂದರ ವಾತಾವರಣ ಇರುತ್ತದೆ. ಇಲ್ಲದಿದ್ದರೆ, ನಾವು ಜಲ್ಸದ ಮೂಲ ಉದ್ದೇಶವಾದ ಜಲ್ಸದಲ್ಲಿ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಿಲ್ಲ. ದೌರ್ಬಲ್ಯಗಳನ್ನು ಕಂಡುಹಿಡಿದು ಪ್ರಶ್ನಿಸಿದರೆ ಇಂತಹ ದೊಡ್ಡ ಮತ್ತು ತಾತ್ಕಾಲಿಕ ವ್ಯವಸ್ಥೆಯಲ್ಲಿ ಹತ್ತಾರು ಅನುಮಾನಗಳು ಉದ್ಭವಿಸಬಹುದು. ಪರಿಪೂರ್ಣತೆ ಸಾಧ್ಯವಿಲ್ಲ. ಪ್ರಕೃತಿಯಲ್ಲಿ ಆತಂಕವನ್ನು ಉಂಟುಮಾಡುವ ಅನೇಕ ದೌರ್ಬಲ್ಯಗಳನ್ನು ಕಾಣಬಹುದು. ಉದಾಹರಣೆಗೆ, ಆಹಾರದ ನಿಬಂಧನೆ ಇದೆ, ಇದರಲ್ಲಿ ಸಾಮಾನ್ಯವಾಗಿ ಅತಿಥಿಗಳಿಗೆ ಸಾಧ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಲಾಗುತ್ತದೆ. ಸಾರು ಇತ್ಯಾದಿಗಳು ಸ್ವಲ್ಪ ಮಟ್ಟಿಗಿರಬಾರದು ಮತ್ತು ಊಟ ಬಡಿಸುವ ಸಹಾಯಕರು ಅತಿಥಿಗಳಿಗೆ ಸರಿಯಾಗಿ ಹೆಚ್ಚಿನ ನೈತಿಕತೆಯನ್ನು ತೋರಿಸುತ್ತ ಸೇವೆ ನೀಡಬೇಕು, ಆದರೆ ಕೆಲವೊಮ್ಮೆ ಅಂದಾಜಿನಲ್ಲಿ ವ್ಯತ್ಯಾಸವಾಗಬಹುದು ಮತ್ತು ಸರಿಯಾಗಿ ಆಹಾರವನ್ನು ನೀಡಲು ಸಾಧ್ಯವಾಗದಿದ್ದರೆ, ಅದರ ಮೇಲೆ ಕೋಪಗೊಳ್ಳದೆ ಕಾರ್ಯಕರ್ತರಿಂದ ವ್ಯಕ್ತಪಡಿಸುವ ಕ್ಷಮೆಯನ್ನು ಬಹಳ ಸೌಜನ್ಯದಿಂದ ಸ್ವೀಕರಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಇಂತಹ ಸಂದರ್ಭಗಳ ವದಗಿಬಂದರೆ ಏನು ಮಾಡಬೇಕು ಎಂಬುದರ ಬಗ್ಗೆ ನಮಗೆ ಯಾವ ಉದಾಹರಣೆಯನ್ನು ತೋರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಪ್ರಯಾಣದಲ್ಲಿ, ಕೆಲಸದಲ್ಲಿ ನಿರತರಾಗಿದ್ದರು, ಆದ್ದರಿಂದ ಅವರು ಆಹಾರವನ್ನು ಬಡಿಸುವಾಗ ಮತ್ತು ಇತರ ಅತಿಥಿಗಳಿಗೆ ಆಹಾರವನ್ನು ನೀಡುವಾಗ ರಾತ್ರಿಯ ಊಟವನ್ನು ಸೇವಿಸಲಿಲ್ಲ ಕಾರ್ಯಕರ್ತರು ಅದನ್ನು ಗಮನಿಸಲಿಲ್ಲ ನಂತರ ಸ್ವಲ್ಪ ಸಮಯದ ನಂತರ ಅದನ್ನು ತಿಂದಿದ್ದಾರೆಯೇ ಎಂದು ನೋಡದೆ ಎತ್ತಿಕೊಂಡು ಹೋಗಿರಬಹುದು. ಊಟ ಮಾಡಿಲ್ಲ, ಅವರು ತಮ್ಮ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ವ್ಯವಸ್ಥಾಪಕರು ಗಮನಹರಿಸಿಲ್ಲ. ಆದರೆ, ತಡರಾತ್ರಿ ಹಸಿವಾದಾಗ ಹಝ್ರತ್ ಮಸೀಹ್ ಮೌಊದ್(ಅ) ಅವರು ಊಟದ ಬಗ್ಗೆ ಕೇಳಿದಾಗ ವ್ಯವಸ್ಥೆಯ ಮಂಡಳಿಯವರೆಲ್ಲರ ಕೈಕಾಲು ಊದಿಕೊಂಡವು..... ಈಗ ಅಲ್ಲಿ ಬಂದಿರುವ ಎಲ್ಲಾ ಅತಿಥಿಗಳು ಮತ್ತಿತರರು

ಎಲ್ಲಾರು ಊಟ ಮಾಡಿದ್ದಾರೆ ಇನ್ನು ಏನೂ ಉಳಿದಿಲ್ಲ ಎಂದು ಬಹಳ ಚಿಂತಿತರಾದರು, ತಡರಾತ್ರಿಯಾಗಿತ್ತು. ಮಾರುಕಟ್ಟೆಯೂ ಸಹ ಮುಚ್ಚಲಾಗಿತ್ತು, ಆದರೆ, ಹೇಗೋ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಆಹಾರ ಖಾಲಿಯಾಗಿದೆ ಎಂದು ತಿಳಿದು ಕೂಡಲೇ ಅಡುಗೆ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಸಂಘಟಕರು ಚಿಂತಿಸಿದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು ಆತಂಕ ಪಡುವ ಅಗತ್ಯವಿಲ್ಲ. ನೋಡಿ! ಮೇಜಿನ ಮೇಲೆ ಕೆಲವು ರೊಟ್ಟಿಯ ತುಂಡುಗಳು ಉಳಿದಿರುತ್ತವೆ, ಅದನ್ನು ತನ್ನಿ. ಹಾಗಾಗಿ ಈ ತುಂಡುಗಳನ್ನು ಸ್ವಲ್ಪ ತಿಂದು ನಿರ್ವಾಹಕರನ್ನು ಸಮಾಧಾನಪಡಿಸಿದರು.

ಹುಝೂರ್ ಅಲೈಹಿಸ್ಸಲಾಮ್ ಅವರು ಅಂದು ಆಹಾರ ಬೇಯಿಸಲು ಆದೇಶ ನೀಡಿದ್ದರೆ ಅದು ನಮಗೆ ಗೌರವದ ವಿಷಯವಾಗುತ್ತಿತ್ತು ಮತ್ತು ಸೇವೆ ಮಾಡಲು ನಮಗೆ ಅವಕಾಶ ಲಭಿಸುತ್ತಿತ್ತು ಮತ್ತು ಅದು ನಮಗೆ ಹೆಮ್ಮೆಯ ವಿಷಯವಾಗುತ್ತುತ್ತು ಎಂದು ವರದಿಗಾರರು ಹೇಳುತ್ತಾರೆ. ಆದರೆ ಅವರು(ಅ) ನಮ್ಮ ನೋವನ್ನು ಅರಿತು, ಅಗತ್ಯವಿಲ್ಲ ಎಂದು ತಡೆದರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಯಾಕೂಬ್ ಅಲಿ ಇರ್ಫಾನಿ ಸಾಹಿಬ್, ಪುಟ–322, 2016 ಮುದ್ರಣ) ಹೀಗೆ, ಇದು ನಮ್ಮ ಮುಂದೆ ಇಡಬೇಕಾದ ಉದಾಹರಣೆಯಾಗಿದೆ.

ನಿಗದಿತ ಸಮಯಕ್ಕೆ ಊಟಕ್ಕೆ ಬರದಿದ್ದರೆ ಯಾವುದೇ ರೀತಿಯ ವೈಯಾರ ಇರಬಾರದು. ಸಿಕ್ಕಿದ್ದನ್ನು ತಿನ್ನಬೇಕು. ಕೆಲವೊಮ್ಮೆ ಸರು ಮುಗಿದಿರುತ್ತದೆ ಆದ್ದರಿಂದ ದಾಲ್ ಅನ್ನು ತಕ್ಷಣವೇ ಬೇಯಿಸಲಾಗುತ್ತದೆ ಏಕೆಂದರೆ ಅದು ಸುಲಭವಾಗಿ ಮತ್ತು ತ್ವರಿತವಾಗಿ ಬೇಯಿಸಬಹುದು, ಹೀಗೆ ಅತಿಥಿಗಳು ಹಸಿವಿನಿಂದ ಉಳಿಯುವುದಿಲ್ಲ, ಆದ್ದರಿಂದ ಅತಿಥಿಯೂ ಅದನ್ನು ಸಂತೋಷದಿಂದ ತಿನ್ನಬೇಕು. ಹಾಗೆಯೇ ರೊಟ್ಟಿಯನ್ನು ವ್ಯರ್ಥ ಮಾಡಬಾರದು ಎಂಬ ಪಾಠವನ್ನೂ ಅವರು (ಅಲೈಹಿಸ್ಸಲಾಮ್) ನೀಡಿದ್ದಾರೆ. ಜನರು ರೊಟ್ಟಿಯ ತುಂಡುಗಳನ್ನು ಬಿಡುತ್ತಾರೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ತಿಳಿದಿತ್ತು, ಆದ್ದರಿಂದ ನೀವು(ಅ) ಅದನ್ನು ತನ್ನಿ ನಾನು ಅದನ್ನು ತಿನ್ನುತ್ತೇನೆ ಎಂದು ಹೇಳಿದರು. ಹಾಗಾಗಿ ಇಲ್ಲಿಯೂ ಸಹ ನಾನು ಅತಿಥಿಗಳಿಗೆ ಹೇಳುವುದೇನೆಂದರೆ, ರೊಟ್ಟಿಗಳನ್ನು ಬೇಯಿಸುವವರು ರೊಟ್ಟಿಯನ್ನು ಬಹಳ ಚೆನ್ನಾಗಿ ಬೇಯಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ, ಆದರೆ ಕೆಲವೊಮ್ಮೆ ಅದನ್ನು ಹಸಿಯಾಗಿ ಅಥವಾ ಟತಿಯಾಗಿ ಸುಟ್ಟಿದ್ದರೆ, ವಿಪರೀತ ಸಂದರ್ಭಗಳಲ್ಲಿ ಅದನ್ನು ಬಿಡಬಹುದು ಆದರೆ ಸಾಮಾನ್ಯವಾಗಿ ಅಲ್ಲ. ಸ್ವಲ್ಪ ಪ್ರಮಾಣದ ಉಳಿದಿದ್ದರೆ, ನಂತರ ರೊಟ್ಟಿಯನ್ನು ವ್ಯರ್ಥ ಮಾಡಬಾರದು. ಇಲ್ಲಿ ರೋಟಿ ಪ್ಲಾಂಟ್ ಚಾಲನೆಯಲ್ಲಿದೆ, ಕಾರ್ಮಿಕರು ಶ್ರಮಿಸುತ್ತಿದ್ದಾರೆ ಮತ್ತು ಪ್ರತಿ ವರ್ಷ ಅವರು ಕೆಲವು ಹೊಸ ಸುಧಾರಣೆಗಳನ್ನು ಮಾಡುತ್ತಾರೆ.

ಅತಿಥಿಗಳು ಈ ಅಡುಗೆಯವರು ಮತ್ತು ರೊಟ್ಟಿ ತಯಾರಿಸುವವರು ವೃತ್ತಿಪರ ಜನರಲ್ಲ ಆದರೆ ಸ್ವಯಂಸೇವಕರು ಮತ್ತು ಜೀವನದ ವಿವಿಧ ಹಂತಗಳಿಂದ ಬಂದವರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಆದ್ದರಿಂದ ಅವರು ಸೇವೆ ಸಲ್ಲಿಸುವ ಪ್ರಾಮಾಣಿಕತೆ ಮತ್ತು ಉತ್ಸಾಹವನ್ನು ಯಾವಾಗಲೂ ಪ್ರಶಂಸಿಸಲಾಗುತ್ತದೆ.

ಉನ್ನತ ನೈತಿಕತೆಯನ್ನು ತೋರಿಸುವುದು, ಉತ್ತಮ ನಡವಳಿಕೆಯನ್ನು ತೋರಿಸುವುದು, ಒಬ್ಬರನ್ನೊಬ್ಬರು ನಗುಮೊಗದಿಂದ ಭೇಟಿಯಾಗುವುದು, ಇತರರಿಗಾಗಿ ತ್ಯಾಗ ಮಾಡುವ ಮನೋಭಾವವನ್ನು ಹೊಂದಿರುವುದು ಕಾರ್ಯಕರ್ತರ ಕೆಲಸ ಮಾತ್ರವಲ್ಲ, ಅತಿಥಿಗಳು ಸಹ ಈ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು.

ನೈತಿಕತೆ ಇಲ್ಲದಿದ್ದರೆ, ಏನೂ ಇಲ್ಲ. ಕಾರ್ಮಿಕರ ಉತ್ತಮ ನಡವಳಿಕೆಯಿಂದ ಮಾತ್ರ ಪರಿಸರ ಶಾಂತಿಯುತವಾಗಿರಲು ಸಾಧ್ಯವಿಲ್ಲ, ಆದರೆ ಎಲ್ಲಾ ಭಾಗವಹಿಸುವವರು ಉತ್ತಮ ನಡವಳಿಕೆಯನ್ನು ತೋರಿಸಬೇಕು. ಮಹಿಳೆಯರು ಕೂಡ ಇದರ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಪುರುಷರು ಕೂಡ ಇದರ ಬಗ್ಗೆ ಕಾಳಜಿ ವಹಿಸಬೇಕು.

ಮುಗುಳ್ನಗುವುದು ಕೂಡ ಸತ್ಯವಿಶ್ವಾಸದ ಭಾಗವಾಗಿದೆ ಮತ್ತು ಸದಖವಾಗಿದೆ ಎಂದು ನಾನು ಕಳೆದ ಬಾರಿ ಒಂದು ಹದೀಸನ್ನು ಉಲ್ಲೇಖಿಸಿ ಹೇಳಿದ್ದೆ. (ಜಾಮಿ ತಿರ್ಮಿಧಿ, ಅಬ್ವಾಬುಲ್ ಬಿರ್ರಿ ವಸ್ಸಿಲ, ಹದೀಸ್–1956) ಆದ್ದರಿಂದ ಇದನ್ನು ಕಾಳಜಿ ವಹಿಸಬೇಕು.

ಜಲ್ಸದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಉತ್ತಮ ಸದ್ಗುಣಗಳನ್ನು ವ್ಯಕ್ತಪಡಿಸಲು ಆಜ್ಞಾಪಿಸಿದ್ದಾರೆ ಅಥವಾ ಅಥವಾ ಅತಿಥಿಗಳ ಕುರಿತಾದ ಉಪದೇಶದ ಬಗ್ಗೆ ಉಪದೇಶದ ಗುಣಮಟ್ಟ ಏನು? ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು, "ಒಬ್ಬನು ತನ್ನ ಸುಖಕ್ಕಿಂತ ತನ್ನ ಸಹೋದರನ ಸುಖಕ್ಕೆ ಆದ್ಯತೆ ನೀಡುವ ತನಕ ಅವನ ವಿಶ್ವಾಸ ಖಂಡಿತವಾಗಿಯೂ ಸರಿಯಾಗಲಾರದು ಎಂದು ನಾನು ಸತ್ಯವಾಗಿ ಹೇಳುತ್ತೇನೆ. ನನ್ನ ಒಬ್ಬ ಸಹೋದರ ರೋಗಿಯೂ ಬಲಹೀನನೂ ಆಗಿರುವಾಗ ನನ್ನ ಮುಂದೆಯೇ ನೆಲದಲ್ಲಿ ಮಲಗುವಾಗ ನಾನು ಆರೋಗ್ಯವಂತನಾಗಿರುವಾಗ ಮಂಚವನ್ನು ಸ್ವಾಧೀನಪಡಿಸಿಟ್ಟುಕೊಳ್ಳುವುದಾದರೆ ಮತ್ತು ರೋಗಿಯಾದ ಅವನು ಅದರ ಮೇಲೆ ಕುಳಿತುಕೊಳ್ಳದಂತೆ ಮಾಡುವುದಾದರೆ ನನ್ನ ಸ್ಥಿತಿಯ ಬಗ್ಗೆ ದುಃಖಿಸಬೇಕಾಗುತ್ತದೆ. ನಾನು ಎದ್ದು ಸಹಾನುಭೂತಿಯಿಂದ ನನ್ನ ಮಂಚವನ್ನು ನನ್ನ ಸಹೋದರನಿಗೆ ಕೊಟ್ಟು ನಾನು ನೆಲದಲ್ಲಿ ಮಲಗದಿದ್ದರೆ, ನನ್ನ ಸಹೋದರ ರೋಗಬಾಧಿತನಾಗಿರುವಾಗ ಅಥವಾ ಯಾವುದಾದರೂ ನೋವಿನಿಂದ ಪೀಡಿತನಾಗಿರುವಾಗ ನಾನು ಸಮಾಧಾನದಿಂದ ನಿದ್ರಿಸುವುದಾದರೆ, ನನ್ನ ಬಗ್ಗೆ ಚಿಂತಿಸಬೇಕಾಗಿದೆ. ನಾನು ನನಗೆ ಸಾಧ್ಯವಿರುವಷ್ಟು ಅವನಿಗೆ ಸೌಲಭ್ಯ ನೀಡಲು ಪ್ರಯತ್ನಿಸಬೇಕಾಗಿದೆ. ನನ್ನ ಧಾರ್ಮಿಕ ಸಹೋದರ ಉದ್ವೇಗಭರಿತನಾಗಿ ನನ್ನೊಂದಿಗೆ ಕಟುವಾಗಿ ಮಾತನಾಡಿದರೆ ನಾನು ಸಹ ಕಟುವಾಗಿ ಮಾತನಾಡುವುದಾದರೆ ನನ್ನ ಸ್ಥಿತಿ ಚಿಂತಾರ್ಹವಾಗಿದೆ. ನಾನು ಮಾಡಬೇಕಾದುದೇನೆಂದರೆ ನಾನು ಅವನೊಂದಿಗೆ ಸಹನೆಯಿಂದ ವರ್ತಿಸಬೇಕು. ನಮಾಝ್‌ಗಳಲ್ಲಿ ಅವನಿಗೋಸ್ಕರ ಪ್ರಾರ್ಥಿಸಬೇಕು. ಏಕೆಂದರೆ ಅವನು ನನ್ನ ಸಹೋದರನಾಗಿದ್ದಾನೆ ಮತ್ತು ಆಧ್ಯಾತ್ಮಿಕವಾಗಿ ರೋಗಿಯಾಗಿದ್ದಾನೆ. ನನ್ನ ಸಹೋದರ ಮುಗ್ಧನಾಗಿದ್ದಾನೆ. ಅವನು ಅಜ್ಞಾನದಿಂದ ಅಥವಾ ತನ್ನ ಮುಗ್ಧತೆ ಕಾರಣದಿಂದ ಏನಾದರೂ ತಪ್ಪು ಮಾಡಿದ್ದರೆ ನಾನು ಅವನನ್ನು ಪರಿಹಾಸ ಮಾಡಬಾರದು. ಅವನೊಂದಿಗೆ ಸಿಟ್ಟಿನಿಂದ ವರ್ತಿಸಬಾರದು. ಅವನನ್ನು ನಿಂದಿಸಬಾರದು. ಹೀಗೆಲ್ಲಾ ವರ್ತಿಸಿದರೆ ಅದು ನಾಶದ ಮಾರ್ಗವಾಗಿದೆ.

ಹೃದಯದಲ್ಲಿ ಮೃದುಭಾವನೆ ತಲೆದೋರುವ ತನಕ ಯಾರೂ ಸತ್ಯಸಂಧ ಸತ್ಯವಿಶ್ವಾಸಿ ಆಗಲಾರ. ಸತ್ಯವಿಶ್ವಾಸಿ ತನ್ನನ್ನು ಕೀಳೆಂದು ಭಾವಿಸಬೇಕು. ಎಲ್ಲ ರೀತಿಗಳ ಅಹಂಭಾವ ತ್ಯಜಿಸಬೇಕು. ಕೋಮಿನ ಸೇವಕನಾಗುವುದು ಅದರ ನಾಯಕನಾಗುವ ಚಿಹ್ನೆಯಾಗಿದೆ. ಬಡವರೊಂದಿಗೆ ಮೃದುವಾಗಿ ಬಾಗಿಕೊಂಡು ಮಾತನಾಡುವುದು ಅಲ್ಲಾಹನಿಂದ ಅಂಗೀಕಾರ ಪಡೆದವನಾಗುವ ಚಿಹ್ನೆಯಾಗಿದೆ. ಕೆಟ್ಟದಕ್ಕೆ ಒಳ್ಳೆಯದರ ಮೂಲಕ ಉತ್ತರ ನೀಡುವುದು ಸಾತ್ವಿಕತೆಯ ಚಿಹ್ನೆಯಾಗಿದೆ. ಸಿಟ್ಟನ್ನು ತಿನ್ನುವುದು ಕಹಿ ಮಾತನ್ನು ಕುಡಿಯುವುದು ಅತ್ಯಂತ ಶ್ರೇಷ್ಠ ಶೌರ್ಯ ಪ್ರದರ್ಶನವಾಗಿದೆ.

(ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ–6, ಪುಟಗಳು 395–396)

ಅವರು(ಅ) ತಮ್ಮ ಅನುಯಾಯಿಗಳಿಗೆ ಈ ಸಾಮಾನ್ಯ ಸೂಚನೆಗಳನ್ನು ನೀಡಿದರು. ಆದುದರಿಂದ ಈ ಮೂರು ದಿನಗಳಲ್ಲಿ ನಾವು ಮಾತುಗಳನ್ನು ಪಾಲಿಸಿದರೆ, ಇದರ ಅಲ್ಪ ಸ್ವಲ್ಪ ಅಭ್ಯಾಸ ನಮಗೆ ಆಗುವುದು. ಉಳಿದ ದಿನಗಳಲ್ಲೂ ತಮ್ಮ ಜೀವಿತದಲ್ಲಿ ನಾವು ಈ ಸಂಗತಿಗಳನ್ನು ಪಾಲಿಸಲು ಸಾಧ್ಯವಾಗುವುದು. ತನ್ನ ಸಹೋದರನಿಗೆ ತನ್ನ ಮೇಲೆ ಆದ್ಯತೆ ನೀಡುವುದು ಸಾಧಾರಣ ವಿಷಯವಲ್ಲ. ಇದು ಬಹಳ ಪರಿಶ್ರಮದ ಕೆಲಸವಾಗಿದೆ. ಹಾಗಾಗಿ ಅದನ್ನು ವಿಶ್ವಾಸಕ್ಕೆ ಸಂಬಂಧಿಸಿದ್ದು ಎಂದರು. ತ್ಯಾಗ ಮತ್ತು ಇತರರ ಹಕ್ಕನ್ನು ಈಡೇರಿಸುವ ಅಂಶವಿಲ್ಲದವರ ವಿಶ್ವಾಸವು ಮಾನ್ಯವಾಗಿಲ್ಲ. ಅರ್ವಶಕ್ತನಾದ ಅಲ್ಲಾಹನು ಕ್ಷುಲ್ಲಕ ವಿಷಯಗಳಿಗೆ ದೊಡ್ಡ ಪ್ರತಿಫಲಕ್ಕೆ ಅರ್ಹರನ್ನು ಮಾಡುವುದಿಲ್ಲ, ಆದರೆ ಕಠಿಣ ಪರಿಶ್ರಮಗಳಲ್ಲಿ ಹೆಚ್ಚಿದವರಿಗೆ ಅವನು ಅನಂತವಾಗಿ ಪ್ರತಿಫಲವನ್ನು ನೀಡುತ್ತಾನೆ. ದಾಸರ ಹಕ್ಕುಗಳನ್ನು ಈಡೇರಿಸುವುದು ತುಂಬಾ ಕಷ್ಟಕರವಾದ ಕೆಲಸವಾಗಿದೆ, ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಹಕ್ಕುಗಳನ್ನು ಕೆಲವೊಮ್ಮೆ ಈಡೇರಿಸಲಾಗುತ್ತದೆ ಆದರೆ ದಾಸರ ಹಕ್ಕುಗಳನ್ನು ಈಡೇರಿಸುವುದು ಬಹಳ ಕಷ್ಟದ ಕೆಲಸವಾಗಿದೆ ಎಂದು ಒಂದೇ ಸ್ಥಳದಲ್ಲಿ ಹೇಳುತ್ತಾರೆ. (ಮಾಲ್ಫುಝಾತ್, ಸಂಪುಟ–8, ಪುಟ–19, 1984)

ಆದುದರಿಂದ ನಮಗಿಂತ ನಮ್ಮ ಸಹೋದರನಿಗೆ ಪ್ರಾಧಾನ್ಯತೆ ನೀಡಬೇಕು ಎಂಬ ಈ ಚಿಂತನೆಯನ್ನು ಪ್ರತಿಯೊಬ್ಬರೂ ತಮ್ಮ ಮುಂದಿಡಬೇಕು. ಈ ಚಿಂತನೆಯು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಹುಟ್ಟಿದರೆ ಅಲ್ಲಾಹನ ಪ್ರಸನ್ನತೆಯನ್ನು ಪಡೆಯಲು ನಾನು ಇತರರ ಹಕ್ಕುಗಳನ್ನು ಪಾವತಿಸಬೇಕು ಎಂಬ ಆಲೋಚನೆಯೊಂದಿಗೆ ಹುಟ್ಟಿದರೆ, ಅಂತಹ ಸಮಾಜವು ಪ್ರೀತಿ ಮತ್ತು ವಾತ್ಸಲ್ಯದ ಸಮಾಜವಾಗುತ್ತದೆ.

ಈ ಪ್ರೀತಿ ಮತ್ತು ವಾತ್ಸಲ್ಯವನ್ನು ವ್ಯಕ್ತಪಡಿಸಲು ಜಲ್ಸದ ಮೂರು ದಿನಗಳಲ್ಲಿ ಮಾತ್ರ ಸಾಕಾಗುವುದಿಲ್ಲ, ಬದಲಿಗೆ ಇಡೀ ಜೀವನವು ಪ್ರೀತಿಯ ಉದಾಹರಣೆಯಾಗುತ್ತದೆ. ಪರಿಶುದ್ಧ ಸಮಾಜದ ಸ್ಥಾಪನೆಗಾಗಿ ಹಝ್ರತ್ ಮಸೀಹ್ ಮೌಊದ್(ಅ) ಬಹಳ ಸುಂದರವಾದ ಉಪದೇಶಗಳನ್ನು ನೀಡಿರುವರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಯಾವನಾದರೂ ನನ್ನೊಡನೆ ಕಠಿಣವಾಗಿ ವರ್ತಿಸುವಾಗ ನಾನು ಕೂಡ ಆತನೊಡನೆ ಅದೇ ರೀತಿಯಲ್ಲಿ ವರ್ತಿಸಿದರೆ ನನ್ನ ಸ್ಥಿತಿಯ ಬಗ್ಗೆ ಖೇದವೆಂದೇ ಹೇಳಬಹುದು.

ಸತ್ಯದಲ್ಲಿ ನಾನು ಆತನಿಗಾಗಿ ದುಆ ಮಾಡಬೇಕಾಗಿದೆ. ಒಟ್ಟಿನಲ್ಲಿ ಇದಾಗಿದೆ ಆ ಅಧ್ಯಾಪನೆಗಳು ಮತ್ತು ಇಸ್ಲಾಂ ಸ್ಥಾಪಿಸಲು ಬಯಸುವ ಪರಿಶುದ್ಧ ಸಮಾಜ. ಹಝ್ರತ್ ಮಸೀಹ್ ಮೌಊದ್(ಅ) ಎಂತಹ ಸುಂದರವಾದ ಉಪದೇಶಗಳನ್ನು ನೀಡಿರುವರು. ತಮ್ಮ ಶಿಷ್ಯರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ನೋಡಲು ಇಚ್ಛಿಸಿದ ಸಮಾಜ ಇದಾಗಿದೆ. ಈ ಮಾತುಗಳು ಇತರರಿಗಾಗಿ ಅಲ್ಲ. ಬದಲಾಗಿ ನಮ್ಮ ಸ್ವಂತ ಸುಧಾರಣೆಗಾಗಿ ಆಗಿದೆ. ಸ್ವತಃ ಇಂತಹ ರೋಗಗಳಿಂದ ದೂರವಾಗುವಾಗಲೇ ಇತರರ ರೋಗಗಳ ಚಿಕಿತ್ಸೆ ಮಾಡಲು ಸಾಧ್ಯ.

ಎಲ್ಲ ವಿಧದ ಅಹಂಕಾರಗಳನ್ನು ಹೊರಗೆ ಹಾಕಬೇಕು. ಅದರ ಬಗ್ಗೆ ಅತಿಥಿಗಳು ಮತ್ತು ಆತಿಥೇಯರು ಗಮನವಿರಿಸಬೇಕು. ಪರಸ್ಪರ ತಪ್ಪುಗಳನ್ನು ಕಡೆಗಣಿಸಲು ಮತ್ತು ಸಮಾಧಾನದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುವಾಗ ನಾವು ಯಾವ ಉದ್ದೇಶಕ್ಕಾಗಿ ಇಲ್ಲಿ ಒಟ್ಟುಗೂಡಿದ್ದೇವೆಯೋ ಆ ಉದ್ದೇಶವನ್ನು ಗಳಿಸುವವರಾಗುವೆವು.

ಕೆಲವೊಮ್ಮೆ ಕ್ಷುಲ್ಲಕ ವಿಷಯಗಳಿಗೂ ಮನಸ್ತಾಪಗಳು ಉಂಟಾಗಿ ಒಬ್ಬರನ್ನೊಬ್ಬರು ಅಸಭ್ಯವಾಗಿ ಕರೆದು ಜಗಳವಾಡುವಂಥ ವಾತಾವರಣ ನಿರ್ಮಾಣವಾಗುತ್ತದೆ. ಈ ವಾತಾವರಣ ನಿರ್ಮಾಣವಾಗಬೇಕಾದರೆ ಮತ್ತು ಭಾವನೆಗಳನ್ನು ನಿಯಂತ್ರಿಸದಿದ್ದರೆ, ಅಂತಹ ಜನರು ಜಲ್ಸಕ್ಕೆ ಬರದಿರುವುದು ಒಳ್ಳೆಯದು ಮತ್ತು ಅದೇ ರೀತಿ ಸೇವೆ ಸಲ್ಲಿಸುವವರಿಗೆ ನಿಯಂತ್ರಿಸಲು ಸಾಧ್ಯವಾಗದಿದ್ದರೆ ಅವರು ಸೇವೆಯನ್ನು ನೀಡಬಾರದು. ಟ್ರಾಫಿಕಿಗೆ ಸಂಬಂಧಪಟ್ಟು ದೂರುಗಳು ಬರುತ್ತವೆ. ಸೀಮಿತ ಪಾರ್ಕಿಂಗ್ ಸ್ಥಳಗಳಿವೆ. ಕಾರುಗಳ ಸಂಖ್ಯೆಗೆ ಅನುಗುಣವಾಗಿ ಪಾರ್ಕಿಂಗ್ ನೀಡಲಾಗುತ್ತದೆ, ಈ ಬಾರಿ ಹೆಚ್ಚು ಕಾರುಗಳು ಇರಬಹುದು. ಪ್ರತಿಯೊಬ್ಬ ಅತಿಥಿಯನ್ನು ಬೇರೆಡೆಗೆ ಕಳುಹಿಸಿದಾಗ ಅವರು ಸಹಕರಿಸುತ್ತ ಹೊರಡಬೇಕು. ಸಾಮಾನ್ಯವಾಗಿ ಅಲ್ಲಾಹನ ಅನುಗ್ರಹಸಿಂದ ಜನರು ಸಹಕರಿಸುತ್ತಾರೆ ಅಲ್ಲಾಹನ ಅನುಗ್ರಹದಿಂದ ಜಮಾಅತ್‌ನ ಸದಸ್ಯರಿಗೆ ಅಂತಹ ತರಬೇತಿ ಇದೆ ಎಂದು ನಾವು ನಂಬುತ್ತೇವೆ, ಆದರೆ ಅವರಲ್ಲಿ ಕೆಲವರು ಅಂತಹ ಹಠಮಾರಿ ಸ್ವಭಾವದವರು ಅಥವಾ ಬೇರೆ ಕಡೆಗೆ ಹೋದರೆ ನಮ್ಮ ಜಲ್ಸದ ಸಮಯ ವ್ಯರ್ಥವಾಗುವುದು ಎಂದು ಭಾವಿಸುತ್ತಾರೆ. ವ್ಯವಸ್ಥಾಪಕರೊಂದಿಗೆ ಸಹಕರಿಸಿರಿ. ಇಲ್ಲದಿದ್ದರೆ ಸಮಯಕ್ಕೆ ಮುಂಚಿತವಾಗಿ ಬನ್ನಿರಿ. ಡ್ಯೂಟಿಯವರು ಕೂಡ ಪ್ರೀತಿಯಿಂದ ಅವರಿಗೆ ತಿಳಿಸಿರಿ. ಒಂದು ಕೆಟ್ಟ ಘಟನೆ ಕೂಡ ನಡೆಯದೇ ಇರಲಿ. ಯಾವುದೇ ವಿಭಾಗದ ಕಾರ್ಯಕರ್ತರನ್ನು ಯಾವುದೇ ಸಂಕಷ್ಟಕ್ಕೆ ಅತಿಥಿಗಳು ಸಿಲುಕಿಸದಂತೆ ಅಲ್ಲಾಹನು ಮಾಡಲಿ. ಕಾರ್ಯಕರ್ತರಿಗೆ ಧೈರ್ಯ ಕೊಡಿರಿ.

ಈ ಮೂರು ದಿನಗಳು ಕೇವಲ ಗೀತೆಗಳು ಮತು ಪದ್ಯಗಳನ್ನು ಹಾಡುವ ಹಾಗೂ ಪ್ರೀತಿ ಮತ್ತು ಪ್ರೇಮದ ಕವಿತೆಗಳನ್ನು ಹಾಡುವ ದಿನಗಳು ಮಾತ್ರವಾಗದಿರಲಿ. ಈ ಮೂರು ದಿನಗಳಿಂದ ಎಂತಹ ಕಿಡಿ ಉಂಟಾಗಲಿ ಎಂದರೆ, ನಿಜವಾದ ಸಮಾಜದ ವೈಶಿಷ್ಟ್ಯವಾದ ಪ್ರೀತಿ ಮತ್ತು ಪ್ರೇಮದ ವಾತಾವರಣ ಸ್ಥಾಪಿಸುವಂತಾಗಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ನಮಗೆ ಒಳ್ಳೆಯತನ ಮತ್ತು ಶುದ್ಧತೆಯನ್ನು ಒಳಗೊಂಡಿರುವ ಶುದ್ಧ ಆಲೋಚನೆಗಳನ್ನು ಹೊಂದಲು ವಿವಿಧ ಸಂದರ್ಭಗಳಲ್ಲಿ ನೆನಪಿಸುತ್ತಾರೆ. ಒಂದು ಸಂದರ್ಭದಲ್ಲಿ, ಅತಿಥಿಗಳು ತಮ್ಮ ಕರ್ತವ್ಯಗಳಿಗೆ ಗಮನ ಕೊಡಲು ಮತ್ತು ಶುದ್ಧವಾದ ಆಲೋಚನೆಗಳನ್ನು ಹೊಂದಲು ನೆನಪಿಸುವಾಗ ಅವರು ಹೇಳಿದರು: "ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚಿಸಲು ಮತ್ತು ಅವನ ಸಂತೃಪ್ತಿಯನ್ನು ಪಡೆಯಲು ಮತ್ತು ಅವನ ಆದೇಶಗಳನ್ನು ಪಾಲಿಸಲು ಮಾತ್ರ ಒಳ್ಳೆಯದನ್ನು ಮಾಡಬೇಕು. ಪ್ರತಿಫಲವಿದೆಯೇ ಅಥವಾ ಇಲ್ಲವೇ ಎಂಬುದನ್ನು ಲೆಕ್ಕಿಸದೆ. ಪಿಸುಮಾತುಗಳು ಮತ್ತು ಭ್ರಮೆಗಳ ಮಧ್ಯದಿಂದ ತೊರೆದಾಗ ಮಾತ್ರ ವಿಶ್ವಾಸವು ಪರಿಪೂರ್ಣವಾಗುತ್ತದೆ. ಇಲ್ಲ. ಬದಲಿಗೆ, ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ಇದನ್ನು ಮಾಡಬೇಕು. "ಸರ್ವಶಕ್ತನಾದ ಅಲ್ಲಾಹನು ಯಾರ ಒಳ್ಳೆಯ ಕಾರ್ಯಗಳನ್ನು ವ್ಯರ್ಥ ಮಾಡುವುದಿಲ್ಲ ಎಂಬುದು ವಾಸ್ತವವಾಗಿದೆ. **ಇನ್ನಲ್ಲಾಹ ಲಾ ಯುಝೀಉ ಅಝಲ್ ಮುಹ್ಸಿನೀನ** (ಅತ್ತೌಬ:120) ನಿಜವಾಗಿಯು, ಅಲ್ಲಾಹನು ನೀತಿವಂತರ ಪ್ರತಿಫಲವನ್ನು ವ್ಯರ್ಥ ಮಾಡುವುದಿಲ್ಲ. ಆದರೆ ಒಳ್ಳೆಯದನ್ನು ಮಾಡುವವನು ಪ್ರತಿಫಲವನ್ನು ಪರಿಗಣಿಸಬಾರದು. ನೋಡಿ!! ಅತಿಥಿಗಳು ವಿಶ್ರಾಂತಿ ಪಡೆಯಲು, ತಂಪ ಪಾನೀಯಗಳು ಅಥವಾ ರುಚಿಕರವಾದ ಆಹಾರವನ್ನು ಇಲ್ಲಿ ಸಿಗುತ್ತದೆ ಎಂಬ ಉದ್ದೇಶದಿಂದ ಇಲ್ಲಿಗೆ ಬಂದರೆ, ಅವರು ಈ ವಿಷಯಗಳಿಗಾಗಿ ಮಾತ್ರ ಬಂದಿರುತ್ತಾರೆ. ಆತಿಥೇಯನ ಕರ್ತವ್ಯವಾಗಿದ್ದರೂ, ಅವನ ಆತಿಥ್ಯವನ್ನು ಸಾಧ್ಯವಾದಷ್ಟು ಕಡಿಮೆ ಮಾಡದೆ ಮತ್ತು ಅವನಿಗೆ ಆರಾಮದಾಯಕವಾಗುವಂತೆ ಮತ್ತು ಅವನು ವಿತರಿಸುತ್ತಾನೆ. ಆದರೆ ಅತಿಥಿಗಳು ಹಾಗೆ ಯೋಚಿಸುವುದು ಅವರಿಗೇ ನಷ್ಟ.

(ಮಲ್‌ಫೂಝಾತ್, ಸಂಪುಟ-2, ಪುಟಗಳು 371-372, 1984)

ಆದ್ದರಿಂದ ಪ್ರತಿಯೊಬ್ಬ ಅತಿಥಿಯು ಮುಂದೆ ಇಡಬೇಕಾದ ಆಲೋಚನೆಗಳು ಇದಾಗಿವೆ. ಸಂಬಂಧಿಕರನ್ನು ಹೊಂದಿರದ ಕೆಲವು ಅತಿಥಿಗಳು ಜಮಾಅತ್‌ನ ವ್ಯವಸ್ಥೆಯಲ್ಲಿ ಉಳಿಯುತ್ತಾರೆ, ಆದರೆ ಕೆಲವೊಮ್ಮೆ ವಸತಿಗಾಗಿ ಬೇಡಿಕೆಗಳನ್ನು ಪೂರೈಸಲು ಕಷ್ಟವಾಗುತ್ತದೆ. ಅದೇ ರೀತಿ, ಜಲ್ಸದ ಸಾಮಾನ್ಯ ವ್ಯವಸ್ಥೆಯಲ್ಲಿ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದ ಕಾರಣ ಇತರ ಕೆಲವು ಸೌಲಭ್ಯಗಳನ್ನು ನೀಡಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಜನರು ಅರ್ಥಮಾಡಿಕೊಳ್ಳುತ್ತಾರೆ. ಎರಡು ದಿನಗಳ ಹಿಂದೆಯಷ್ಟೇ, ನಾನು ಒಂದು ಕುಟುಂಬವನ್ನು ಭೇಟಿಯಾದೆ, ಅವರು ಬಹಳ ಹಿಂದೆಯೇ ಆಡಳಿತ ಮಂಡಳಿಗೆ ತಿಳಿಸಿದ್ದರೂ, ಕೆಲವು ತಪ್ಪು ತಿಳುವಳಿಕೆಯಿಂದ, ಅವರು ಬಯಸಿದ ವಸತಿ ಸಿಗದೆ, ಅವರು ತಮ್ಮ ಓರ್ವ ಸಂಬಂಧಿಕರ ಮನೆಯಲ್ಲಿ ವ್ಯವಸ್ಥೆ ಮಾಡಿಕೊಂಡರು ಆ ಸಂಬಂಧಿಕರ ಮನೆಯೂ ಕೂಡ ತುಂಬಾ ಚಿಕ್ಕದಾದರೂ ಅವರು ಹಾಸಿಗೆ mattress ಅಥವಾ ಹಾಸಿಗೆಯ ಮೇಲೆ ಮಲಗಿರಬಹುದು ಹೀಗೆ ಅತಿಥಿ ಮತ್ತು ಆತಿಥೇಯರು ಇಬ್ಬರೂ ಕಷ್ಟಗಳನ್ನು ಎದುರಿಸಿರಬಹುದು, ಆದರೆ ಅವರು ಜಲ್ಸಾದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಆಲಿಸಿದರು. ಮತ್ತು ಅವರು ಇದನ್ನು ನಾನು ಪ್ರಶ್ನಿಸಿದಾಗ ಬಹಳ ಸಂತೋಷಗಿಂದ ಮುಗುಳ್ನಗೆ ನಗುತ್ತ ನನಗೆ ವಿಷಯಗಳನ್ನು ಹೇಳಿದರು. ಯಾರನ್ನು ಸಹ ದೂರಲಿಲ್ಲ. ಸಾಮಾನ್ಯವಾಗಿ ಇಂತಹ ಅತಿಥಿಗಳು ಇದ್ದಾರೆ, ಆದರೆ ನಾನು ಕೆಲವರನ್ನು ಭೇಟಿಯಾದಾಗ, ಅವರ ಮನಸ್ಥಿತಿಯನ್ನು ತಿಳಿದುಕೊಂಡು, ಅವರು ಜಮಾಅತ್‌ನ ವಸತಿ ವ್ಯವಸ್ಥೆಯಲ್ಲಿ ತಂಗಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ, ಆದರೆ ಸಂತೋಷದಿಂದ ಅವರು ತಂಗುತ್ತಾರೆ. ನನ್ನ ಆಲೋಚನೆ ಅವರ ಆಲೋಚನೆಗೆ ವಿರುದ್ಧವಾಗಿದ್ದರೂ ಮತ್ತು ಅವರು ತಂಗಲು ಸಾಧ್ಯವಾಗದಿರಬಹುದು ಆದರೆ ಅವರು ಸಂತೋಷದಿಂದ ತಂಗುತ್ತಾರೆ ಮತ್ತು ಬಹುಸಂಖ್ಯಾತರು ಹಾಗೆ ಇದ್ದಾರೆ ಆದರೆ ಕೆಲವರಿಗೆ ಸಾಕಷ್ಟು ಆಕ್ಷೇಪಗಳೂ ಇರುತ್ತವೆ.

ಅಲ್ಲಾಹನ ಸಂಪ್ರೀತಿಗಾಗಿ ಈ ದಿನಗಳು ಕಳೆದರೆ ಮತ್ತು ಸಂತೋಷದಿಂದ ಸಹಿಸಿದರೆ ಅಲ್ಲಾಹನು ಬೇರೆ ಯಾವುದಾದರೂ ಮಾರ್ಗದಿಂದ ದಯಪಾಲಿಸುತ್ತಾನೆ.

ಈಗ ಇಲ್ಲಿಯೂ ಸಹ, ಅವರ ವಸತಿಗಳು, ಟೆಂಟ್‌ಗಳು ಅಥವಾ ಸಾಮೂಹಿಕ ವಸತಿಗಳು ಏನಾಗಿದ್ದವು, ಅವು ಹೆಚ್ಚಿನ ಜನರಿಂದ ತುಂಬಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಅಂತಹ ವ್ಯವಸ್ಥೆಯನ್ನು ಮಾಡುವುದು ಅಗತ್ಯವಾಗಬಹುದು, ಅಲ್ಲಿ ಸಮಸ್ಯೆ ಇದ್ದರೆ, ಅತಿಥಿಗಳು ಈ ವ್ಯವಸ್ಥೆಯನ್ನು ಸಂತೋಷದಿಂದ ಸಹಿಸಿಕೊಳ್ಳಬೇಕು. ಆದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ, ಅತಿಥಿಗಳಿಗೆ ಸಾಧ್ಯವಾದಷ್ಟು ಸಾಂತ್ವನ ನೀಡುವುದು ಆತಿಥೇಯರ ಕರ್ತವ್ಯವಾಗಿದೆ ಮತ್ತು ಅಲ್ಲಾಹನು ಅತಿಥಿಗಳಿಗೆ ಸಣ್ಣ ಕಷ್ಟಗಳನ್ನು ಸಹಿಸಿಕೊಳ್ಳುವ ಅತ್ಯುತ್ತಮ ಪ್ರತಿಫಲವನ್ನು ನೀಡಲಿ. ಅವುಗಳನ್ನು ಮುಂದಿಟ್ಟುಕೊಂಡು ಸರ್ವಶಕ್ತನಾದ ಅಲ್ಲಾಹನಿಂದ ಪ್ರತಿಫಲವನ್ನು ಪಡೆಯಲು ಪ್ರಯತ್ನಿಸಬೇಕು.

ಸಮಾಜದಲ್ಲಿ ಶಾಂತಿ ಮತ್ತು ಭದ್ರತೆಯಿಂದ ಬದುಕಲು, ಶಾಂತಿ ಮತ್ತು ಭದ್ರತೆಯ ವಾತಾವರಣವನ್ನು ನಿರ್ಮಿಸಲು ಮತ್ತು ಶಾಂತಿ ಮತ್ತು ಭದ್ರತೆಯನ್ನು ಹರಡಲು ಹಝ್ರತ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರು ನೀಡಿದ ಉಪದೇಶಗಳೇನು? ಒಮ್ಮೆ ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದು ಹೇಳಿದನು, ಯಾ ರಸೂಲಲ್ಲಾಹ್(ಸ)! ಯಾವ ಇಸ್ಲಾಂ ಉತ್ತಮವಾಗಿದೆ? ಅವರು(ಸ) ಉತ್ತರಿಸಿದರು: ನಿರ್ಗತಿಕರಿಗೆ ಆಹಾರ ನೀಡುವುದು ಮತ್ತು ನಿಮಗೆ ತಿಳಿದಿರುವ ಅಥವಾ ತಿಳಿದಿಲ್ಲದ ಪ್ರತಿಯೊಬ್ಬರಿಗೂ ಸಲಾಮ್ ಮಾಡುವುದು. (ಸಹೀಹ್ ಬುಖಾರಿ, ಕಿತಾಬುಲ್ ಈಮಾನ್, ಹದೀಸ್-12) ಸಮಾಜದಲ್ಲಿ ಪ್ರೀತಿ ಮತ್ತು ಭ್ರಾತುತ್ವವನ್ನು ಸ್ಥಾಪಿಸಲು ಮತ್ತು ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸಲು ಸುಂದರವಾದ ತತ್ವವಾಗಿದೆ, ಇದನ್ನು ಅಳವಡಿಸಿಕೊಂಡರೆ, ಶಾಂತಿ ಮತ್ತು ಭದ್ರತೆಯನ್ನು ಹರಡುವ ಸಮಾಜವನ್ನು ಸ್ಥಾಪಿಸಬಹುದು.

ಬಡವರು ಬಡವರಾಗುತ್ತಿರುವ ಕಾರಣ ಜಗತ್ತಿನಲ್ಲಿ ಬಹಳಷ್ಟು ಅವ್ಯವಸ್ಥೆಗಳಿವೆ. ಇಂದಿಗೂ ಎರಡು ಹೊತ್ತಿನ ಊಟವೂ ಸಿಗದ ಲಕ್ಷಾಂತರ ಜನರಿದ್ದಾರೆ. ರೊಟ್ಟಿ ತಿಂದರೆ ವಾಸತಿ ಇಲ್ಲ. ಶ್ರೀಮಂತ ದೇಶಗಳೆಂದು ಕರೆಯಲ್ಪಡುವ ಈ ದೇಶಗಳಲ್ಲಿಯೂ ಸಹ ಅಂತಹ ವಿಷಯಗಳಿವೆ, ಇಲ್ಲಿ ಈ ದೇಶದಲ್ಲಿ, ಶ್ರೀಮಂತ ದೇಶ ಎಂದು ಕರೆಯಲ್ಪಡುವ ಯು.ಕಡ

ಯಲ್ಲಿಯೂ ಸಹ, ಅವರ ಎಮಿರೇಟ್‌ಗಳು ಇನ್ನು ಆ ಸ್ಥಿತಿಯಲ್ಲಿಲ್ಲ, ಆದರೆ ಅವು ಅನೇಕರಿಗಿಂತ ಉತ್ತಮವಾಗಿದ್ದಾವೆ. ಬೆಲೆಯೇರಿಕೆಯಿಂದಾಗಿ ಸಾವಿರಾರು ಜನರು ಮತ್ತು ಮಕ್ಕಳು ಬೀದಿಗಳಲ್ಲಿ ಮಲಗಿದ್ದಾರೆ ಈ ಕಾರಣದಿಂದಾಗಿ, ರೊಟ್ಟಿ ಸರಿಯಾಗಿ ಲಭ್ಯವಿಲ್ಲ ಮತ್ತು ವಸತಿ ಕೂಡ ಲಭ್ಯವಿಲ್ಲ. ಹಾಗಾಗಿ ಇದು ಹಸಿದವರಿಗೆ ಅನ್ನ ನೀಡುವ ಇಸ್ಲಾಮಿನ ಮೂಲ ಬೋಧನೆಯಾಗಿದೆ. ಮುಸ್ಲಿಮರು ಈ ತತ್ವವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅವರ ಆಡಳಿತಗಾರರು ತಮ್ಮ ಪ್ರಜೆಗಳ ಹಕ್ಕುಗಳನ್ನು ಈಡೇರಿಸಲು ಮತ್ತು ಅವರ ಬೊಕ್ಕಸವನ್ನು ತುಂಬಲು ಮಾತ್ರವಲ್ಲದೆ ಬಡವರ ಮತ್ತು ನಿರ್ಗತಿಕರ ಅಗತ್ಯಗಳನ್ನು ಪೂರೈಸಲು ಮತ್ತು ಸಮಾಜದಿಂದ ಆತಂಕ ಮತ್ತು ದೌರ್ಜನ್ಯಗಳನ್ನು ತೊಡೆದುಹಾಕಲು ಬಯಸಬೇಕು. ಈ ಕಾರಣದಿಂದ ಈಗಿನ ಆತಂಕವೂ ವ್ಯಾಪಕವಾಗಿದೆ.

ಹಝ್ರತ್ ಪೈಗಂಬರ್(ಸ) ಸಲಾಂ ಹೇಳಲು ಉಪದೇಶಿಸಿರುವರು. ಸಲಾಂ ಎಂದು ಕೇವಲ ಬಾಯಿಮಾತಾಗಿ ಹೇಳುವುದಲ್ಲ. ಮನುಷ್ಯನು ಮನಸ್ಸಾರೆ ಸಲಾಂ ಹೇಳುವಾಗ ಆತನು ಸಮಾಧಾನವನ್ನು ತಲುಪಿಸಲು ಪ್ರಯತ್ನಿಸುವವನಾಗುತ್ತಾನೆ. ಇತರರ ಬಗ್ಗೆ ಉತ್ತಮ ಭಾವನೆಗಳನ್ನು ಹೊಂದುತ್ತಾನೆ. ಇತರರ ಕಷ್ಟತೆಗಳನ್ನು ದೂರಮಾಡುವವನಾಗುತ್ತಾನೆ. ಈ ದಿನಗಳಲ್ಲಿ ಪ್ರತಿಯೊಬ್ಬ ಅಹ್ಮದಿಯ ಸಮಾಧಾನದ ಸಂದೇಶ ತಲಪಿಸಲು, ಸಲಾಮನ್ನು ರೂಢಿಗೊಳಿಸಲು ಮತ್ತು ಪರಸ್ಪರ ಉತ್ತಮ ಭಾವನೆಗಳನ್ನು ಹೊಂದಲು ಪ್ರಯತ್ನಿಸಬೇಕು.

ಯಾವ ಜನರಿಂದ ಪ್ರಯೋಜನ ಲಭಿಸುತ್ತದೋ ಅಥವಾ ಯಾವ ಜನರೊಂದಿಗೆ ಸಂಬಂಧ ಇದೆಯೋ ಅಂಥವರೊಡನೆ ಜನರು ಬಹಳ ಉತ್ಸಾಹದಿಂದ ಮಾತನಾಡುತ್ತಾರೆ. ಹೃದಯಗಳ ಹಗೆ ದೂರವಾಗುವಾಗ ಮತ್ತು ಮನಸ್ಸಾರೆ ಇತರರಿಗಾಗಿ ಸಮಾಧಾನದ ಪ್ರಾರ್ಥನೆ ಮಾಡುವಾಗ ಮಾತ್ರ ಯಥಾರ್ಥವಾದ ಶಾಂತಿ ಮತ್ತು ಸಮಾಧಾನ ಉಂಟಾಗುವುದು. ಸಾಮಾನ್ಯವಾಗಿ ಸಮಾಧಾನದ ಸಂದೇಶ ತಲುಪಿಸುತ್ತಿರಬೇಕು.

ಹಾಗಾಗಿ ಈ ಜಲ್ಸದಲ್ಲೂ ಇಂತಹವರು ತಮ್ಮ ದ್ವೇಷವನ್ನು ದೂರ ಮಾಡುವ ಮೂಲಕ ಭದ್ರತೆಯ ಸಂದೇಶವನ್ನು ಸಾರಲು ಪ್ರಯತ್ನಿಸಬೇಕು ಮತ್ತು ಸಾಮಾನ್ಯ ಪರಿಸರದಲ್ಲಿ ಭದ್ರತೆಯ ಸಂದೇಶವನ್ನು ನೀಡುವುದನ್ನು ಮುಂದುವರಿಸಬೇಕು. ಅಲ್ಲಾಹನು ಎಲ್ಲರಿಗೂ ಇದನ್ನು ಅನುಸರಿಸುವ ಅವಕಾಶವನ್ನು ನೀಡಲಿ ಮತ್ತು ಈ ಜಲ್ಸದ ವಾತಾವರಣವು ಸಂಪೂರ್ಣ ಶಾಂತಿ ಮತ್ತು ಭದ್ರತೆಯ ವಾತಾವರಣವಾಗಲಿ, ಆದರೆ ಉನ್ನತ ನೈತಿಕತೆ ಮತ್ತು ಸೇವಕರ ಹಕ್ಕುಗಳ ಪಾವತಿಯು ನಮ್ಮ ಜೀವನದ ಶಾಶ್ವತ ಭಾಗವಾಗಲಿ.

ಜಲ್ಸದ ವ್ಯವಸ್ಥೆಗಳ ವಿಷಯದಲ್ಲಿ ನಾನು ಕೆಲವು ಸಾಮಾನ್ಯ ವಿಷಯಗಳತ್ತ ಗಮನ ಸೆಳೆಯಲು ಬಯಸುತ್ತೇನೆ, ಅದನ್ನು ಎಲ್ಲರೂ ಕಾಳಜಿ ವಹಿಸಬೇಕು. ಮೊದಲನೆಯದು, ಜಲ್ಸದ ಕಾರ್ಯಕ್ರಮಗಳನ್ನು ಮೌನವಾಗಿ ಮತ್ತು ಗಮನವಿಟ್ಟು ಆಲಿಸಿರಿ. ಜಲ್ಸದಲ್ಲಿ ಬಂದು ಕುಳಿತುಕೊಳ್ಳಿರಿ. ಕೆಲವು ಭಾಷಣಗಳು ಬಹಳ ಉತ್ತಮವಾಗಿರುವುದರಿಂದ ಕೇಳುವುದು ಮತ್ತು ಕೆಲವನ್ನು ಕೇಳದೇ ಇರದನ್ನು ಹಝ್ರತ್ ಮಸೀಹ್ ಮೌಊದ್(ಅ) ಇಷ್ಟಪಡುತ್ತಿರಲಿಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–398–401) ಎಲ್ಲಾ ಭಾಗವಹಿಸುವವರು ಜಲ್ಸಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಆಧ್ಯಾತ್ಮಿಕ ಮತ್ತು ಬೌದ್ಧಿಕ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸಬೇಕು.

ಅಲ್ಲದೆ, ಜಲ್ಸದ ದಿನಗಳಲ್ಲಿ ದೇವಸ್ಮರಣೆ ಮತ್ತು ದುರೂದ್ ಹೇಳುವುದರ ಕಡೆಗೆ ಗಮನವಿರಲಿ. ಈಗಂತು ಮುಹರ್ರಮಿನ ದಿನಗಳು ಆಗಿವೆ. ಮತ್ತು ಇಂದು ಮೊಹರಂನ 10 ನೇ ದಿನವಾಗಿದೆ. ಈ ದಿನಗಳಲ್ಲಿ ವಿಶೇಷವಾಗಿ ದುರೂದ್ ಷರೀಫ್ ಅನ್ನು ಪಠಿಸಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನ ಪವಿತ್ರ ಪ್ರವಾದಿ ಹಝ್ರತ್ ಪೈಗಂಬರ್(ಸ.ಅ) ಅವರ ಪವಿತ್ರ ಸ್ಥಾನಮಾನವನ್ನು ಹೆಚ್ಚಿಸುವ ಚಿಂತನೆಯೊಂದಿಗೆ ಪಠಿಸಬೇಕು. ಹಝ್ರತ್ ಪೈಗಂಬರ್(ಸ.ಅ) ಅವರ ಸಂದೇಶವು ಯಶಸ್ವಿಯಾಗಲಿ ಮತ್ತು ಮೇಲುಗೈ ಸಾಧಿಸಲಿ ಎಂದು ಒರಾಥಿಸುತ್ತಿರಬೇಕು. ಹುಝೂರ್(ಸ.ಅ) ಅವರ ಶರೀಅತ್‌ಗೆ ಉಳಿವು ಮತ್ತು ಹಿರಿಮೆಯನ್ನು ನೀಡಲಿ. ನಿಮ್ಮ(ಸ) ಉಮ್ಮತ್ತಿನ ಸಲುವಾಗಿ ನಿಮ್ಮ ಪ್ರಾರ್ಥನೆಯಿಂದ ನಾವು ಅನುಗ್ರಹಿಸಲ್ಪಡುತ್ತೇವೆ ಮತ್ತು ಸರ್ವಶಕ್ತನಾದ ಅಲ್ಲಾಹನು ಈ ಉಮ್ಮತ್ ಅನ್ನು ಎಲ್ಲಾ ರೀತಿಯ ಭ್ರಷ್ಟಾಚಾರದಿಂದ ಶುದ್ಧೀಕರಿಸಲಿ.

ಅಲ್ಲಾಹನ ಹೆಸರನ್ನು ಎತ್ತಿಕೊಂಡೇ ಹಝ್ರತ್ ಪೈಗಂಬರ್(ಸ)ರ ಆಧ್ಯಾತ್ಮಿಕ ಮತ್ತು ದೈಹಿಕ ಕುಟುಂಬದ ಮೇಲೆ ದೌರ್ಜನ್ಯ ಮಾಡಲಾಗಿತ್ತು. ಈಗ ಅದೇ ದೌರ್ಜನ್ಯಗಳನ್ನು ಹಝ್ರತ್ ಪೈಗಂಬರ್(ಸ)ರ ಆಧ್ಯಾತ್ಮಿಕ ಕುಟುಂಬ, ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಜಮಾಅತಿನ ಮೇಲೆ ನಡೆಸಲಾಗುತ್ತಿವೆ.

ಇತ್ತೀಚಿಗೆ ಪಾಕಿಸ್ತಾನದಲ್ಲಿ ಬಹಳ ಕಠಿಣವಾದ ಪರಿಸ್ಥಿತಿ ಇದೆ. ಪ್ರವಾದಿ ಪ್ರೇಮದ ಹೆಸರಿನಲ್ಲಿ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಸತ್ಯದಲ್ಲಿ ನಮ್ಮ ವಿಶ್ವಾಸದ ಬುನಾದಿಯೇ ಹಝ್ರತ್ ಪೈಗಂಬರ್(ಸ)ರ ಮೇಲೆ ಅವರ ಖ಼ಾತಮುನ್ನಬಿಯ್ಯೀನ್ ಆಗಿರುವುದರ ಮೇಲೆ ಮತ್ತು ಅವರು ತಂದ ಶರೀಅತಿನ ಮೇಲೆ ಆಗಿದೆ. ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಅಂಗೀಕರಿಸುತ್ತಾ ನಾವು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಿದ್ದೇವೆ. ನನಗೆ ಲಭಿಸಿದೆಲ್ಲವೂ ಹಝ್ರತ್ ಪೈಗಂಬರ್(ಸ)ರೊಂದಿಗೆ ಇರಿಸಿದ ಪ್ರೇಮದಿಂದ ಆಗಿವೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಅನೇಕ ಎಡೆಗಳಲ್ಲಿ ಹೇಳಿರುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ರಸೂಲುಲ್ಲಾಹ್(ಸ) ಅವರ ಮೇಲಿನ ಪ್ರೀತಿಯ ಗುಣಮಟ್ಟದ ಬಗ್ಗೆ ಮತ್ತು ಈ ಕಾರಣಕ್ಕಾಗಿ ಸರ್ವಶಕ್ತನಾದ ಅಲ್ಲಾಹನು ಅವರನ್ನು ಹೇಗೆ ಅನುಗ್ರಹಿಸಿದನು ಎಂಬುದರ ಬಗ್ಗೆ ಅವರು(ಅ) ಹೇಳುತ್ತಾರೆ: "ಒಮ್ಮೆ ದರೂದ್ ಷರೀಫ್ ಪಠಣದಲ್ಲಿ, ಅಂದರೆ ಹಝ್ರತ್ ಪೈಗಂಬರ್(ಸ) ಅವರು ಮೇಲೆ ದುರೂದ್ ಪಠಿಸುವುದರಲ್ಲಿ ನನಗೆ ಒಂದು ಸುದೀರ್ಘ ಕಾಲದವರೆಗೆ ಬಹಳ ಕಾಳಜಿವಹಿಸಿದ್ದೆ ಏಕೆಂದರೆ ಸರ್ವಶಕ್ತನಾದ ಅಲ್ಲಾಹನ ಮಾರ್ಗಗಳು ಅತ್ಯಂತ ನಿಖರವಾದ ಮಾರ್ಗಗಳಾಗಿವೆ ಎಂಬ ವಿಶ್ವಾಸವಿತ್ತು. ಹಝ್ರತ್ ಪೈಗಂಬರ್(ಸ) ಮೂಲಕ ಹೊರತುಪಡಿಸಿ ಅವುಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ನಂಬಿದ್ದೆ. ಅಲ್ಲಾಹನು ಹೇಳುವಂತೆ: **ವಬ್‌ತಘೂ ಇಲೈಹಿಲ್ ವಸೀಲ** (ಅಲ್–ಮಾಇದಃ: 36) ನಂತರ ಸ್ವಲ್ಪ ಸಮಯದ ನಂತರ ದೈವದರ್ಶನವಾಯಿತು ಅಂದರೆ ಇಬ್ಬರು ಸಿಕ್ಕೆಗಳು ಅಂದರೆ ನೀರು ತರುವವರು, ಅವರಲ್ಲಿ ಒಬ್ಬರು ಮನೆಯ ಒಳಮಾರ್ಗದಲ್ಲಿ ಮತ್ತು ಇನ್ನೊಬ್ಬರು ಹೊರ ಮಾರ್ಗದ ಮೂಲಕ ನನ್ನ ಮನೆಗೆ ಪ್ರವೇಶಿಸಿದರು, ಅವರು ತಮ್ಮ ಭುಜದ ಮೇಲೆ ಪ್ರಕಾಶದ ಬಿಂದಿಗೆಗಳನ್ನು ಹೊತ್ತಿದ್ದರು." ನೀರಿನ ಬದಲಿಗೆ ಪ್ರಕಾಶದ ಬಿಂದಿಗೆಗಳನ್ನು ಹೊಂದಿದ್ದರು. ಅವರು ಹೇಳುತ್ತಿದ್ದರು **"ಹಾಝಾ ಬಿಮಾ ಸಲ್ಲೈತ ಅಲಾ ಮುಹಮ್ಮದಿನ್(ಸ)"** (ಹಖೀಖತುಲ್ ವಹೀ, ರೂಹಾನಿ ಖಝಾಇನ್, ಸಂಪುಟ–22, ಪುಟ–131 ಅಡಿಟಿಪ್ಪಣಿ) ಅಂದರೆ ಈ ದೈವ ಪ್ರಕಾಶದ ಬಹುಮಾನಗಳಿಗೆ ಕಾರಣ ನೀವು ಹಝ್ರತ್ ಪೈಗಂಬರ್(ಸ) ಅವರ ಮೇಲೆ ಕಳುಹಿದ ದರೂದ್ ಷರೀಫ್ ಆಗಿದೆ.

ಹೀಗೆ ಇದು ನಿಮ್ಮ ಪ್ರೀತಿಯ ಸ್ಥಿತಿಯಾಗಿತ್ತು ಮತ್ತು ಹೀಗೆ ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಅನುಗ್ರಹಿಸಿದನು. ಆದುದರಿಂದ, ನಾನು ಕಂಡುಕೊಂಡದ್ದು ಹಝ್ರತ್ ಪೈಗಂಬರ್(ಸ.ಅ) ರವರ ಮೂಲಕವೇ ಮತ್ತು ಅವರ ಮೇಲೆ ದರೂದ್ ಷರೀಫನ್ನು ಕಳುಹಿಸುವ ಮೂಲಕ ಮತ್ತು ಅವರ ಪ್ರೀತಿಯಲ್ಲಿ ನಾಶವಾಗುವುದರ ಮೂಲಕ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅನೇಕ ಸ್ಥಳಗಳಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗಾಗಿ ನೀವುಗಳು ನನ್ನನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಂದ ಹೇಗೆ ಪ್ರತ್ಯೇಕವಾಗಿ ಪರಿಗಣಿಸುತ್ತೀರಿ. ಆದಾಗ್ಯೂ, ಈ ದಿನಗಳಲ್ಲಿ ದೇವಸ್ಮರಣೆ ಮತ್ತು ದುರೂದ್ ಹೇಳುವುದರ ಕಡೆಗೆ ಗಮನವಿರಲಿ. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ವಾಗ್ದಾನ ಮಾಡಿದ ಈ ಅನುಗ್ರಹಗಳನ್ನು ತ್ವರಿತವಾಗಿ ಇಡೀ ಜಗತ್ತಿಗೆ ಹರಡುವಂತೆ ಮಾಡಲಿ.

ಜಲ್ಸದಲ್ಲಿ ಮಹಿಳೆಯರು ತಿಳಿವಳಿಕೆ ಇರುವ ಮಕ್ಕಳೊಡನೆ ಕಾರ್ಯಕ್ರಮಗಳನ್ನು ಆಲಿಸಬೇಕೆಂದು ಮನವರಿಕೆ ಮಾಡಿಸಬೇಕು. ಬಾಲ್ಯಾವಸ್ಥೆಯ ತರಬೇತಿಯೇ ಮನಸ್ಸಿನಲ್ಲಿ ಸ್ಥಾಪಿತವಾಗಿರುತ್ತದೆ. ಮಕ್ಕಳ ಮಾರ್ಕ್ಯೂನಲ್ಲಿ ಕುಳಿತುಕೊಳ್ಳುವ ಮಹಿಳೆಯರು ಸಹ ಕಡಿಮೆ ಮಾತನಾಡಲು ಪ್ರಯತ್ನಿಸಬೇಕು ಮತ್ತು ಕಾರ್ಯವಿಧಾನಗಳನ್ನು ಆಲಿಸುವತ್ತ ಗಮನ ಹರಿಸಬೇಕು. ಮಕ್ಕಳು ಕಡಿಮೆ ಶಬ್ದ ಮಾಡುತ್ತಾರೆ ಆದರೆ ಮಹಿಳೆಯರು ಹೆಚ್ಚು ಮಾತನಾಡುತ್ತಾರೆ ಎಂಬ ದೂರು ಕೂಡ ಇದೆ. ಈ ಬಗ್ಗೆ ಗಮನ ಹರಿಸಬೇಕು.

ಅಂತೆಯೇ, ಭದ್ರತೆಯ ವಿಷಯದಲ್ಲಿ, ಪುರುಷರು ಮತ್ತು ಮಹಿಳೆಯರು ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರು ತಮ್ಮ ಪರಿಸರದ ಮೇಲೆ ಕಣ್ಣಿಡಬೇಕು. ಇದು ಉತ್ತಮ ಭದ್ರತಾ ಸಾಧನವಾಗಿದೆ. ಮತ್ತು ಅಂತೆಯೇ, ನಿಮ್ಮ ಪ್ರೋಗ್ರಾಂನಲ್ಲಿ ಬರೆದ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ ಮತ್ತು ಅನುಸರಿಸಿ. ಜಲ್ಸದಿಂದ ಉತ್ತಮ ರೀತಿಯಲ್ಲಿ ಪ್ರಯೋಜನ ಪಡೆಯುವ ಅವಕಾಶವನ್ನು ಅಲ್ಲಾಹನು ಎಲ್ಲರಿಗೂ ನೀಡಲಿ. ಅಲ್ಲಾಹನು ಎಲ್ಲ ತೊಂದರೆಗಳಿಂದ ಸಂರಕ್ಷಿಸಲಿ. ತನ್ನ ಕೃಪೆ ಮತ್ತು ಕಾರುಣ್ಯದ ಮಳೆ ವರ್ಷಿಸುತ್ತಾ ಇರಲಿ.

...*...*...*...

ನಿಮ್ಮ ಇಜ್ತಿಮಾದ ವಿಷಯ "ಆರ್ಥಿಕ ತ್ಯಾಗ – ಮಾಡಲ್ ವಿಲೇಜ್" ಎಂಬುದು ಸೂಕ್ತವಲ್ಲ. ಇದು ಸೀಮಿತ ವಿಷಯವಾಗಿದೆ
ನಿಮ್ಮ ಇಜ್ತಿಮಾದ ವಿಷಯವು "ಖಿದ್ಮತೆ ಖಲ್ಖ್" ಎಂದಾಗಬೇಕು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ "ಮೇರ ಮಖ್ಸೂದ್ ವ ಮತ್‌ಲೂಬ್ ವ ತಮನ್ನಾ ಖಿದ್ಮತೆ ಖಲ್ಖ್ ಅಸ್ತ್" ಅಂದರೆ ನನ್ನ ಆಗಮನದ ಮೂಲ ಉದ್ದೇಶ ಜನರ ಸೇವೆಯಾಗಿದೆ."

* ಎಲ್ಲಾ ಧರ್ಮಗಳು, ಪಂಗಡಗಳು, ವರ್ಣಗಳು, ಜನಾಂಗಗಳು ಮತ್ತು ರಾಷ್ಟ್ರೀಯತೆಯ ಜನರಿಗೆ ಸೇವೆ ಸಲ್ಲಿಸುವುದು ಜಮಾಅತ್‌ನ ಪ್ರಾಥಮಿಕ ಉದ್ದೇಶಗಳಲ್ಲಿ ಒಂದಾಗಿದೆ, * ಪ್ರತಿಯೊಬ್ಬ ನಾಸಿರ್ ಹೃತ್ಪೂರಕವಾಗಿ ತಮ್ಮ ಕೆಲಸ ಮಾಡಲು ಪ್ರಯತ್ನಿಸಬೇಕು, * ಅವರು ಬಡವರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸಬೇಕು * ಅವರು ಬಡವರನ್ನು ಸಹಾಯಮಾಡಲು ಖರ್ಚು ಮಾಡಬೇಕು, * ಅವರ ಅಗತ್ಯಗಳನ್ನು ನೋಡಿಕೊಳ್ಳಬೇಕು ಮತ್ತು ಪ್ರಯತ್ನಿಸಬೇಕು, * ಅವರು ಬಡವರು, ಅನಾಥರು ಮತ್ತು ವಿಧವೆಯರಿಗೆ ಒಳ್ಳೆಯ ಉದ್ದೇಶ ಮತ್ತು ಪ್ರಾಮಾಣಿಕತೆಯಿಂದ ಸೇವೆ ಮಾಡಬೇಕು.

**ಇಜ್ತಿಮಾ ಮಜ್ಲಿಸ್ ಅನ್ಸರ್ ಉಲ್ಲಾಹ್ ಹಾಲೆಂಡ್ 2022 ರ ಸಂದರ್ಭದಲ್ಲಿ, ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸಿಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ವಿಶ್ವಾಸವರ್ಧಕ ಸಂದೇಶ**

ಗೌರವಾನ್ವಿತ ಅಧ್ಯಕ್ಷ ಸಾಹೇಬ್ ಮಜ್ಲಿಸ್ ಅನ್ಸರುಲ್ಲಾಹ್ ದಿ ನೆದರ್ಲ್ಯಾಂಡ್ಸ್–

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

"ಆರ್ಥಿಕ ತ್ಯಾಗ: ಮಾಡಲ್ ವಿಲೇಜ್" ವಿಷಯದ ಕುರಿತು 26 ರಿಂದ 28 ಆಗಸ್ಟ್ 2022 ರವರೆಗೆ ನೀವು ನಿಮ್ಮ ರಾಷ್ಟ್ರೀಯ ಮಟ್ಟದ ಇಜ್ತಿಮಾವನ್ನು ಆಯೋಜಿಸಲು ಮಾರ್ಗದರ್ಶನ ಕೋರುವ ನಿಮ್ಮ ಪತ್ರವನ್ನು ನಾನು ಸ್ವೀಕರಿಸಿದ್ದೇನೆ. ರಾಷ್ಟ್ರೀಯ ಮಟ್ಟದ ಇಜ್ತಿಮಾವನ್ನು ನಡೆಸುವ ನಿಮ್ಮ ವಿನಂತಿಯನ್ನು ನಾನು ಅನುಮೋದಿಸುತ್ತೇನೆ, ಆದಾಗ್ಯೂ ನಿಮ್ಮ ಇಜ್ತಿಮಾದ ಥೀಮ್ "ಆರ್ಥಿಕ ತ್ಯಾಗ: ಮಾಡಲ್ ವಿಲೇಜ್" ಎಂಬುದು ಸೂಕ್ತವಲ್ಲ ಮತ್ತು ಆರ್ಥಿಕ ತ್ಯಾಗದ ವಿಶಾಲ ಅರ್ಥದಲ್ಲಿ ತುಂಬಾ ಕಿರಿದಾದ ವಿಷಯವಾಗಿದೆ. ಅಂತಹ ಯೋಜನೆಗಳಿಗೆ ಸಂಬಂಧಿಸಿದ ಹೆಚ್ಚಿನ ಕೆಲಸವನ್ನು ಹ್ಯುಮಾನಿಟಿ ಫಸ್ಟ್ ಮತ್ತು ಐಎಎಎಇ ಮೂಲಕ ಮಾಡಲಾಗುತ್ತದೆ. ಆದ್ದರಿಂದ, ನಿಮ್ಮ ಇಜ್ತಿಮಾದ ಶೀರ್ಷಿಕೆಯನ್ನು "ಖಿದ್ಮತೆ ಖಲ್ಖ್" ಎಂದು ಬದಲಾಯಿಸಕೊಳ್ಳಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ: "ಮೆರಾ ಮಖ್ಸೂದ್ ವ ಮತ್ಲೂಬ್ ವ ತಮನ್ನಾ ಖಿದ್ಮತೆ ಖಲ್ಖ್ ಅಸ್ತ್" ಅಂದರೆ ನನ್ನ ಮೂಲ ಉದ್ದೇಶ ಮತ್ತು ಬಯಕೆಯು ಸೃಷ್ಟಿಗಳ ಸೇವೆಯಾಗಿದೆ. ಅದೇ ರೀತಿ, ವಿನಂತಿಸಿದಂತೆ. ಈ ಶುಭ ಸಂದರ್ಭದ ಕುರಿತು, ಮಜ್ಲಿಸ್ ಅನ್ಸರುಲ್ಲಾಹ್ ನೈದರ್ಲ್ಯಾಂಡ್ಸ್ ಸದಸ್ಯರಿಗೆ ನನ್ನ ಸಂದೇಶವೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದಿಂದ ಅಲ್ಲಾಹನು ನಮಗೆ ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪುನರುಜ್ಜೀವನಗೊಳಿಸಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತನ್ನ ಆಗಮನದ ಮೂಲ ಮತ್ತು ಮುಖ್ಯ ಉದ್ದೇಶವು ಮನುಷ್ಯನಲ್ಲಿ ಪ್ರಾಮಾಣಿಕ ಉದ್ದೇಶವನ್ನು ಸೃಷ್ಟಿಸುವುದಾಗಿದೆ ಎಂದು ವಿವರಿಸಿದ್ದಾರೆ, ಇದರಿಂದ ಅವರು ಅಲ್ಲಾಹನ ಹಕ್ಕುಗಳನ್ನು ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಪೂರೈಸಲು ತಮ್ಮ ಕೈಲಾದಷ್ಟು ಪ್ರಯತ್ನಿಸಬೇಕು. ಮನುಕುಲಕ್ಕೆ ಸಮಗ್ರ ಆಧ್ಯಾತ್ಮಿಕ ಮತ್ತು ಭೌತಿಕ ಸೇವೆಯಾಗಿರುವ "ಖಿದ್ಮತೆ ಖಲ್ಖ್" ನಮ್ಮ ಧರ್ಮದ ಮೂಲಭೂತ ಅಂಶವಾಗಿದೆ. ಎಲ್ಲಾ ಧರ್ಮಗಳು, ಪಂಗಡಗಳು, ಜನಾಂಗಗಳು ಮತ್ತು ರಾಷ್ಟ್ರೀಯತೆಗಳ ಜನರಿಗೆ ಸೇವೆ ಸಲ್ಲಿಸುವುದು ಜಮಾಅತ್ ಮತ್ತು ಮಜ್ಲಿಸ್ ಅನ್ಸರುಲ್ಲಾಹ್ ಅವರ ಪ್ರಾಥಮಿಕ ಉದ್ದೇಶಗಳಲ್ಲಿ ಒಂದಾಗಿದೆ. ಈ ಸೇವೆಗಳಲ್ಲಿ ಭಾಗವಹಿಸುವುದು ಮತ್ತು ಈ ನಿಟ್ಟಿನಲ್ಲಿ ಪರಸ್ಪರ ಸಹಾಯ ಮಾಡುವುದು ಎಲ್ಲಾ ಸದಸ್ಯರ ಸಾಮೂಹಿಕ ಜವಾಬ್ದಾರಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮಾನವಕುಲಕ್ಕೆ ನೀಡಿದ ಮತ್ತು ನಾವು ಅನುಸರಿಸಲು ಹೇಳಿಕೊಟ್ಟ ಪ್ರೀತಿ, ಶಾಂತಿ ಮತ್ತು ಕರುಣೆಯ ಪವಿತ್ರ ಸಂದೇಶವು ನಮಗೆ ಆಹ್ಲಾದಕರ ಬದಲಾವಣೆಯ ಮೂಲವಾಗಿದೆ. ನಾವು ನಮ್ಮ ಸುತ್ತಮುತ್ತಲೂ ನೋಡಬೇಕು ಮತ್ತು ಇಂದು ಮುಸ್ಲಿಮರು ಇಸ್ಲಾಂ ಧರ್ಮವನ್ನು ಹೇಗೆ ಆಚರಿಸುತ್ತಿದ್ದಾರೆ ಎಂಬುದನ್ನು ನೋಡಬೇಕು. ಇದನ್ನು ಪ್ರತಿಬಿಂಬಿಸುವುದು ಅನಿವಾರ್ಯವಾಗಿ ಸಂಪೂರ್ಣ ಹತಾಶೆಯ ಭಾವನೆಗೆ ಕಾರಣವಾಗುತ್ತದೆ. ಮುಸ್ಲಿಮರು ದಾರಿ ತಪ್ಪಿದ್ದಾರೆ. ಅಲ್ಲಾಹನು ತನ್ನ ಪ್ರೀತಿಯ ಪ್ರವಾದಿ ಮುಹಮ್ಮದ್(ಸ) ಅವರನ್ನು ಕಳುಹಿಸಿದ ಗುರಿಯನ್ನು ಸಾಧಿಸಲು ಅವರು ವಿಫಲರಾಗಿದ್ದಾರೆ. ಆದಾಗ್ಯೂ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದೊಂದಿಗೆ, ಇಸ್ಲಾಂನ ಈ ಮೂಲಭೂತ ಮತ್ತು ಪ್ರಮುಖ ತತ್ವಗಳನ್ನು ಪುನರುಜ್ಜೀವನಗೊಳಿಸಲಾಗಿದೆ. ಆದ್ದರಿಂದ ಈ ಗುರಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ನಂತರ ಅದನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪೂರೈಸಲು ಪ್ರಯತ್ನಿಸುವುದು ನಮ್ಮ ಮೊದಲ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬ ನಾಸಿರ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬೋಧನೆಗಳನ್ನು ಪ್ರಪಂಚದಾದ್ಯಂತ ಹರಡಲು ತನ್ನ ಮೊದಲ ಆದ್ಯತೆಯನ್ನು ಮಾಡಬೇಕು, ಅವನ ಮಾತುಗಳಿಂದ ಅಲ್ಲ, ಆದರೆ ಅವನ ಕಾರ್ಯಗಳಿಂದ ಮತ್ತು ನಿಜವಾದ ಉತ್ಸಾಹದಿಂದ ಮಾನವಕುಲದ ಸೇವೆ ಮಾಡುವ ಮೂಲಕ. ಅವರು ಕಷ್ಟದಲ್ಲಿರುವ ಜನರ ಸೇವೆಗೆ ಪ್ರಯತ್ನಿಸಬೇಕು. ಎಲ್ಲ ಜನರ ಕಲ್ಯಾಣಕ್ಕಾಗಿ ಶ್ರಮಿಸಬೇಕು. ಅವರು ಬಡವರ ಪರಿಹಾರಕ್ಕಾಗಿ ಖರ್ಚು ಮಾಡಬೇಕು ಮತ್ತು ಅವರ ಅಗತ್ಯಗಳನ್ನು ನೋಡಿಕೊಳ್ಳಬೇಕು. ಬಡವರು, ಅನಾಥರು ಮತ್ತು ವಿಧವೆಯರ ಸೇವೆ ಮಾಡಲು ಅವರು ಉತ್ತಮ ಉದ್ದೇಶ ಮತ್ತು ಪ್ರಾಮಾಣಿಕ ಉದ್ದೇಶದಿಂದ ಪ್ರಯತ್ನಿಸಬೇಕು ಮತ್ತು ಮಾನವೀಯತೆಯ ಸುಧಾರಣೆಗೆ ಸದಾ ಶ್ರಮಿಸಬೇಕು. ಈ ಪ್ರಯತ್ನವು ನಿಮ್ಮ ಸ್ವಂತ ವಿಶ್ವಾಸವನ್ನು ಬಲಪಡಿಸುವುದು ಮಾತ್ರವಲ್ಲದೆ ಇಸ್ಲಾಂ ಧರ್ಮದ ಸುಂದರವಾದ ಬೋಧನೆಗಳ ಬಗ್ಗೆ ಅಜ್ಞಾನವಿರುವ ಇತರ ಧರ್ಮಗಳ ಜನರನ್ನು ತಲುಪಲು ನಿಮಗೆ ಅನುವು ಮಾಡಿಕೊಡುತ್ತದೆ. ಅಂತಹ ಕ್ರಮಗಳು ಮತ್ತು ಕಾರ್ಯಗಳು ಸರ್ವಶಕ್ತನಾದ ಅಲ್ಲಾಹನು ಅವರ ಸಮ್ಮುಖದಲ್ಲಿ ನಿಮ್ಮನ್ನು ನಿಜವಾದ ಅನ್ಸಾರ್ ಮಾಡುತ್ತದೆ ಮತ್ತು ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೋಧನೆಗಳನ್ನು ಅನುಸರಿಸಲು ಸಾಧ್ಯವಾಗುತ್ತದೆ.

ಅಲ್ಲಾಹನು ನಿಮಗೆ ಹಾಗೆ ಮಾಡಲು ಅನುವು ಮಾಡಿಕೊಡಲಿ ಮತ್ತು ನಿಮ್ಮ ಇಜ್ತಿಮಾದ ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಂದ ನೀವು ಪ್ರಯೋಜನ ಪಡೆಯುವಂತೆ ಎಲ್ಲಾ ರೀತಿಯಲ್ಲಿ ಅನುಗ್ರಹಿಸಲಿ. ಆಮೀನ್

ವಸ್ಸಲಾಮ್,
ಮಿರ್ಝಾ ಮಸ್ರೂರ್ ಅಹ್ಮದ್
**ಖಲೀಫತುಲ್ ಮಸೀಹ್ ಖಾಮಿಸ್**

(ಅಖ್ಬಾರ್ ಅಲ್–ಫಝಲ್ ಇಂಟರ್ನ್ಯಾಷನಲ್, ಡಿಸೆಂಬರ್ 6, 2022 ಗೆ ಧನ್ಯವಾದಗಳು)

<u>ದಿವ್ಯದೂತರು (ಮಲಾಯಿಕ)</u>

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ.” ***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನನಗೆ ಸ್ಪಷ್ಟ ಪಡಿಸಿದ್ದೇನೆಂದರೆ ನನ್ನ ಆಹ್ವಾನ ತಲುಪಿದ ಪ್ರತಿಯೊಬ್ಬ ವ್ಯಕ್ತಿ ಯಾರು ನನ್ನನ್ನು ಸವೀಕರಿಸುವುದಿಲ್ಲವೋ ಅವನು ಮುಸಲ್ಮಾನನಲ್ಲ, ಅಲ್ಲಾಹನ ದೃಷ್ಟಿಯಲ್ಲಿ ಅವನು ಶಿಕ್ಷೆಗೆ ಅರ್ಹನು.

* ಇನ್ನೊಂದು ಕಡೆ ಮಿರ್ಝಾ ಬರೆಯುತ್ತಾರೆ. ಇದು ಸ್ಪಷ್ಟವಿದೆ. ದಿವ್ಯವಾಣಿಗಳಲ್ಲಿ ನನ್ನ ಕುರಿತು ಪದೇ ಪದೇ ಪ್ರಸ್ತಾಪಿಸಲಾಗಿದ್ದೇನೆಂದರೆ "ನೀನು ಅಲ್ಲಾಹನ ಅವತಾರ, ಅಲ್ಲಾಹನಿಂದ ನಿಯುಕ್ತಗೊಂಡಿರುವ ಸುಧಾರಕ, ಅಲ್ಲಾಹನ ಪ್ರತಿನಿಧಿ ಮತ್ತು ಅಲ್ಲಾಹನ ಕಡೆಯಿಂದ ಅವತರಿಸಿದವನು. ಅವನು ಹೇಳಿದ ಮಾತುಗಳನ್ನು ನಂಬಿರಿ, ಅವನ ಶತ್ರುಗಳು ನರಕವಾಸಿಗಳಾಗುವರು. (ರಿಸಾಲ ದಾವತ್ ಖೌಮ್, ರೂಹಾನಿ ಖಝಾಈನ್, ಸಂಪುಟ-11, ಪುಟ-62 ಟಿಪ್ಪಣಿ)

* ಈ ಕಿಡಿಯನ್ನು ತಡೆಯದಿದ್ದರೆ ಆ ದಿನಗಳು ದೂರವಿರಲಾರರು ಇವರುಗಳು ಸರಕಾರವನ್ನು ತಪ್ಪು ಗ್ರಹಿಕೆಗೆ ಒಲಪಡಿಸಿ ಮುಸಲ್ಮಾನರ ಮಸೀದಿಗಳನ್ನು ಮತ್ತು ಸಂಸ್ಥೆಗಳನ್ನು ವಶಪಡಿಸಿಕೊಳ್ಳುವರು.

ಇವೆಲ್ಲಾ ಆರೋಪಗಳಿಗೆ ಇನ್‌ಶಾಅಲ್ಲಾಹ್ ನಾವು ಮುಂದಿನ ಸಂಚಿಕೆಗಳಲ್ಲಿ ಉತ್ತರವನ್ನು ನೀಡುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಭಿವೃದ್ಧಿಯನ್ನೇ ನೋಡಿರಿ. ಕ್ರಮೇಣ ಅಭಿವೃದ್ಧಿಯಾಯಿತು. ಮಿನ್‌ಹಾಜ್ ನುಬುವತ್ತು (ಪ್ರವಾದಿತ್ವ ಅಡಿಯಲ್ಲಿ) ಸ್ಥಾಪನೆಗೊಂಡ ಈ ಸಂಘಟನೆಯು ಕ್ರಮೇಣ ಅಭಿವೃದ್ಧಿಗೊಳ್ಳುವುದು. ಇಲ್ಲಿಯೂ ಅದೇ ಕಾನೂನು ಕಾರ್ಯರೂಪಕ್ಕೆ ಬರುವುದು. ಆದ್ದರಿಂದ ನೀವು ಸಹ ಸಹಾಬರ ರೀತಿಯಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಪದೇ ಪದೇ ಇಲ್ಲಿ ಬಂದು ನನ್ನ ಸಹವಾಸದಲ್ಲಿರಿ. ಆಗ ನೀವು ಸಹಾಬರು ನೋಡಿದಂತಹ ದೃಶ್ಯ ನೀವು ಸಹ ನೋಡುವಿರಿ ಮತ್ತು ಸಹಾಬರು ಪಡೆದದ್ದನ್ನು ಎಂದರೆ ಅಬೂಬಕಕರ, ಉಮರ್ ಮತ್ತು ಇತರರು (ರ) ರಂತೆ ಪಡೆಯುವಿರಿ.

**(ಮಲ್ಫೂಝಾತ್, ಸಂಪುಟ 17, ಪುಟ 476, ಮುದ್ರಣ 2018 ಖಾದಿಯಾನ್)**

*ಕವನ "ಮಹ್‌ಮೂದ್ ಕೀ ಆಮೀನ್"*

(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ಹಮ್‌ದೋ ಸನಾ ಉಸೀ ಕೋ ಜೋ ಝಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯೀ ಸಾನೀ
**ಅರ್ಥ:** ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖೀ ವಹೀ ಹಮೇಶ ಗ್ಯೈರ್ ಉಸ್‌ಕೇ ಸಬ್ ಹೈಂ ಫಾನೀ
ಗ್ಯೈರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
**ಅರ್ಥ:** ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗ್ಯೈರ್ ಹೈಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
**ಅರ್ಥ:** ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
**ಅರ್ಥ:** ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗ್ಯೈರ್ ಉಸ್‌ಕೇ ಝೂಟ್ ಸಾರಾ
ಯೆಃ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ
**ಅರ್ಥ:** ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ-5, ಪುಟ-354, ಮುದ್ರಣ ಖಾದಿಯಾನ್ 2003)**

## ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ-3, ಪುಟ-687)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖ಼ಝಾ಼ಇನ್ ಸಂಪುಟ 17, ಪುಟ 345)***

## ತಫ್ಸೀರೆ ಕಬೀರ್

**ಕೆಲವರು ಜಿಪುಣತನದಿಂದ ತಮ್ಮ ಮಕ್ಕಳಿಗೆ ಪೂರ್ಣ ಆಹಾರವನ್ನು ನೀಡುವುದಿಲ್ಲ ಅಥವಾ ಬೆಳವಣಿಗೆಗೆ ಅಗತ್ಯವಾದ ಆಹಾರವನ್ನು ನೀಡುವುದಿಲ್ಲ**

**ಅವರು ಸರಿಯಾದ ಉಡುಪುಗಳನ್ನು ನೀಡುವುದಿಲ್ಲ, ಹಾಗೆ ಮಾಡುವುದು ಅವರನ್ನು ಕೊಲ್ಲುವುದಕ್ಕೆ ಸಮಾನವಾಗಿರುತ್ತದೆ**

**ಕೆಲವರು ಹಣ ಖರ್ಚು ಮಾಡುವ ಭಯದಿಂದ ಉತ್ತಮ ಶಿಕ್ಷಣವನ್ನು ನೀಡುವುದಿಲ್ಲ ಮತ್ತು ಅದು ಮಗುವಿನ ನೈತಿಕ ಅಥವಾ ಆಧ್ಯಾತ್ಮಿಕ ಸಾವಿಗೆ ಕಾರಣವಾಗುತ್ತದೆ**

**ಸರ್ವಶಕ್ತನಾದ ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಸಲಹೆ ನೀಡುವುದೇನೆಂದರೆ ಮಕ್ಕಳ ಆರೋಗ್ಯ ಮತ್ತು ನೈತಿಕತೆಗೆ ಅಗತ್ಯವಾದ ವೆಚ್ಚಗಳನ್ನು ಎಂದಿಗೂ ಉಳಿಸಬೇಡಿ**

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರಾ ಬನಿ ಇಸ್ರಾಈಲ್‌ನ ಆಯತ್ 32 **ವಲಾ ತಖ್ತುಲು ಔಲಾದುಕುಮ್ ಖಶ್ಯತ ಇಮ್‌ಲಾಖಿನ್, ನಹ್‌ನು ನರ್ಝುಖುಹುಮ್ ವ ಇಯ್ಯಾಕುಮ್, ಇನ್ನ ಖತ್ಲಹುಮ್ ಕಾನ ಖಿತ್‌ಅನ್ ಕಬೀರ** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

**ಲಾ ತಖ್ತುಲೂ ಔಲಾದುಕುಮ್ ಖಶ್ಯತ ಇಮ್‌ಲಾಖ್** ಅಂದರೆ ಮಕ್ಕಳ ಮೇಲೆ ಹಣ ಖರ್ಚಾಗುತ್ತದೆ ಎಂದು ಹೆದರಿ ಮಕ್ಕಳನ್ನು ಕೊಲ್ಲಬೇಡಿ' ಎಂದು ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ. ಈ ಆದೇಶವು ಹೆಣ್ಣುಮಕ್ಕಳ ಹತ್ಯೆಗೆ ಸಂಬಂಧಿಸಿಲ್ಲ ಏಕೆಂದರೆ ಪವಿತ್ರ ಖುರ್‌ಆನ್‌ನಲ್ಲಿ ಎಲ್ಲಿಯೂ ಹೆಣ್ಣುಮಕ್ಕಳ ಹತ್ಯೆಗೆ ಜನರು ಖರ್ಚಿಗೆ ಹೆದರಿ ಕೊಲ್ಲುತ್ತಾರೆ ಎಂದು ಹೇಳಲಾಗಿಲ್ಲ, ಬದಲಿಗೆ ಅವರ ಜನ್ಮವು ತಮ್ಮ ಅವಮಾನಕ್ಕೆ ಕಾರಣವೆಂದು ಪರಿಗಣಿಸುತ್ತಾರೆ, ಆದ್ದರಿಂದ ಅವರು ಅವರನ್ನು ಕೊಲ್ಲುತ್ತಾರೆ ಎಂದು ಕಾರಣ ನೀಡಲಾಗುತ್ತದೆ. ಅದೇ ರೀತಿ ಬಡತನ ಮತ್ತು ತೊಂದರೆಯ ಕಾರಣದಿಂದ ಮಕ್ಕಳನ್ನು ಕೊಲ್ಲಬಾರದು ಎಂದು ಈ ಆಯತ್‌ನ ಅರ್ಥವಾಗಲಾರದು, ಏಕೆಂದರೆ ಇಮ್ಲಾಖ್‌ನ ಅರ್ಥವು ಬಡತನ ಮತ್ತು ಕಷ್ಟವಲ್ಲ, ಬದಲಿಗೆ ಅದರ ಅರ್ಥ ಸಂಪತ್ತನ್ನು ಖರ್ಚು ಮಾಡುವುದಾಗಿದೆ. ಹೀಗೆ ಈ ಆಯತ್‌ನ ಅರ್ಥವು ಹಣದ ಖರ್ಚಿನಿಂದ ಭಯಪಟ್ಟು ಕೊಲ್ಲಬೇಡಿ ಎಂದಾಗಿದೆ.

ಈ ಜಾಗದಲ್ಲಿ ಹಣ ಖರ್ಚು ಆಗಬಾರದು ಎಂಬ ಭಯದಿಂದ ಯಾರಾದರೂ ತಮ್ಮ ಮಕ್ಕಳನ್ನು ಕೊಲ್ಲುತ್ತಾರೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಾಗಾಗಿ ಲೋಕದ ಅನುಭವದ ಮಟ್ಟಿಗೆ ಇಂತಹ ಘಟನೆಗಳು ಸರಿಯಾದ ಮನಸ್ಸಿನ ಜನರಲ್ಲಿ ಕಂಡುಬರುವುದಿಲ್ಲ, ಅಲ್ಲದೆ ಹಣವಿಲ್ಲದವರು ಸಹ ತಮ್ಮ ಮಕ್ಕಳನ್ನೂ ಕೊಲ್ಲದಿರುವುದನ್ನು ನಾವು ನೋಡುತ್ತೇವೆ. ಹಾಗಾಗಿ ಈ ಕೊಲೆಗೆ ಇನ್ನೊಂದು ಅರ್ಥವಿದೆ ಮತ್ತು ಈ ಅಪರಾಧವನ್ನು ನಾವು ಮನುಷ್ಯರಲ್ಲಿ ಹುಡುಕಬೇಕು ಎಂದು ತಿಳಿಯುತ್ತದೆ. ಹೀಗೆ ಬೇರೆ ಬೇರೆ ಜನರ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಜಿಪುಣತನದಿಂದ ಕೆಲವರು ತಮ್ಮ ಮಕ್ಕಳನ್ನು ಸರಿಯಾಗಿ ತರಬೇತಿಗೊಳಿಸದೇ ಇರುವುದು ಗೊತ್ತಾಗುತ್ತದೆ. ಅವರು ಸಂಪೂರ್ಣ ಆಹಾರವನ್ನು ನೀಡುವುದಿಲ್ಲ ಅಥವಾ ಬೆಳವಣಿಗೆಗೆ ಅಗತ್ಯವಾದ ಆಹಾರವನ್ನು ನೀಡುವುದಿಲ್ಲ. ಇಂತಹ ಜಿಪುಣರು ನಮ್ಮ ಸಂಪತ್ತನ್ನು ಅವರಿಗಾಗಿ ಖರ್ಚು ಮಾಡುತ್ತಾರೆ ಎಂಬ ಭಯದಿಂದ ತಮ್ಮ ಮಕ್ಕಳನ್ನು ವಿಷದಿಂದ ಅಥವಾ ಕತ್ತು ಹಿಸುಕಿ ಕೊಲ್ಲುವ ಘಾತಿರ್-ಉಲ್-ಅಕಲ್‌ಗಳಲ್ಲಿ (ಹುಚ್ಚರಲ್ಲಿ) ಮಾತ್ರ ಕಂಡುಬರುತ್ತದೆ. ಆದರೆ ಇಂತಹ ಜಿಪುಣರು ಸಂಪತ್ತಿದ್ದರೂ ಜಿಪುಣತನದಿಂದ ತಮ್ಮ ಮಕ್ಕಳಿಗೆ ಒಳ್ಳೆಯ ಆಹಾರವನ್ನು ಕೊಡದ ಸಾಮಾನ್ಯ ಬಲಮನಸ್ಕರಲ್ಲಿ ಹೇರಳವಾಗಿ ಕಂಡುಬರುತ್ತದೆ. ಅವರು ಸರಿಯಾದ ಬಟ್ಟೆ ನೀಡುವುದಿಲ್ಲ. ಕೆಲವೊಮ್ಮೆ ಅವರು ಆಹಾರದ ಕೊರತೆಯಿಂದ ಅನಾರೋಗ್ಯಕ್ಕೆ ಒಳಗಾಗುತ್ತಾರೆ, ಕೆಲವೊಮ್ಮೆ ಬಟ್ಟೆಯ ಕೊರತೆಯಿಂದ ಅವರು ನ್ಯುಮೋನಿಯಾ ಇತ್ಯಾದಿಗಳಿಂದ ಬಳಲುತ್ತಿದ್ದಾರೆ. ಈ ರೀತಿಯ ಜನರು ಪ್ರಪಂಚದಲ್ಲಿ ಸಾವಿರಾರು ಮಿಲಿಯನ್‌ಗಳಲ್ಲಿ ಕಂಡುಬರುತ್ತಾರೆ ಮತ್ತು ಪ್ರತಿ ದೇಶದಲ್ಲಿ ಕಂಡುಬರುತ್ತಾರೆ. ಅದೇ ರೀತಿ ಕೊಲೆ ಎಂದರೆ ನೈತಿಕ ಮತ್ತು ಆಧ್ಯಾತ್ಮಿಕ ಕೊಲೆ ಎಂದರ್ಥ. ಸಂಪತ್ತಿನ ಖರ್ಚಿನ ಭಯದಿಂದ ಉತ್ತಮ ಶಿಕ್ಷಣ ನೀಡುವುದಿಲ್ಲ ಮತ್ತು ಮಗುವಿನ ನೈತಿಕ ಅಥವಾ ಆಧ್ಯಾತ್ಮಿಕ ಸಾವಿಗೆ ಕಾರಣವಾಗುವಂತೆ ಈ ಆಯತ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ದಾಸರಿಗೆ ಸಲಹೆ ನೀಡುತ್ತಾನೆ. ಈ ನಡವಳಿಕೆಯನ್ನು ತಪ್ಪಿಸಿ ಮತ್ತು ಮಕ್ಕಳ ಆರೋಗ್ಯ ಮತ್ತು ನೈತಿಕತೆಗೆ ಅಗತ್ಯವಾದ ಖರ್ಚುಗಳನ್ನು ಅವುಗಳಿಂದ ಎಂದಿಗೂ ಹಿಂಜರಿಯಬೇಡಿ ಮತ್ತು ಕೊಲೆ ಎಂಬ ಪದವನ್ನು ಬಳಸಲಾಗಿದೆ ಅದಕ್ಕೆ ಕಾರಣವೇನೆಂದರೆ ಮನುಷ್ಯನು ಮಕ್ಕಳನ್ನು ಕೊಲ್ಲುವುದನ್ನು ನೈಸರ್ಗಿಕವಾಗಿ ದ್ವೇಷಿಸುತ್ತಾನೆ. ಆದ್ದರಿಂದ, ಈ ಪದವನ್ನು ಬಳಸುವುದರ ಮೂಲಕ ಅವರ ಗಮನವನ್ನು ಹೀಗೆ ಸೆಳೆಯಲಾಗಿದೆ ಅಂದರೆ ನೀವು ಯಾವುದೇ ಸಂದರ್ಭದಲ್ಲಿ ನಿಮ್ಮ ಸ್ವಂತ ಕೈಗಳಿಂದ ಮಕ್ಕಳನ್ನು ಕೊಲ್ಲಲು ಸಿದ್ಧರಿಲ್ಲ, ಆದರೆ ನೀವು ಇನ್ನೊಂದು ರೀತಿಯ ಕೊಲೆ ಮಾಡುತ್ತಿದ್ದೀರಿ, ಅಂದರೆ ಮಕ್ಕಳ ಆಹಾರ ಮತ್ತು ಉಡುಪುಗಳ ಕಡೆ ಗಮನಹರಿಸುತ್ತಿಲ್ಲ. ಹೀಗೆ ಅವರ ಅವರ ಆರೋಗ್ಯವನ್ನು ಹಾಳುಮಾಡುತ್ತೀರಿ ಅಥವಾ ಅವರ ತರಬೇತಿಯ ಬಗ್ಗೆ ಕಾಳಜಿ ವಹಿಸುವುದಿಲ್ಲ ಹೀಗೆ ಅವರ ನೈತಿಕತೆಯನ್ನು ಹಾಳುಮಾಡುತ್ತೀರ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-326, 2010, ಪ್ರಕಟಿತ ಖಾದಿಯಾನ್)**

### ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)** **(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

### ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ.

***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

**(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

## ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ದೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು.

**(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-15)**

ಆಭರಣಗಳ ಝಕಾತ್ ನೀಡುವಿಕೆ ಕುರಿತು ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ.

**(ಅಲ್-ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ"

**(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-306)**

ಆಭರಣಗಳು ಮತ್ತು ನಗದು ರೂಪಾಯಿಯ ಝಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗ್ಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಿಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೊಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಏಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 27, 28 ಮತ್ತು 29ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 31 August 2023, Issue No. 35

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-34ರ ಉಳಿದ ಭಾಗ ಮುಂದುವರಿಸಲಾಗಿದೆ)*

ಅವರು ಹಝ್ರತ್ ಯೂಸೂಫ್(ಅ) ರವರ ಘಟನೆ ವಿವರವಾಗಿ ಹೇಳುತ್ತಾ ಹೇಳಿದರು. ಯೂಸೂಫ್(ಅ) ಅವರ ಸಹೋದರರು ಅವರಿಗೆ ಕೇಡನ್ನು ಬಯಸಿದರು. ಆದರೆ ಅಲ್ಲಾಹನು ಅವರಿಗೆ ಹಿತವನ್ನುಂಟು ಮಾಡಿದರು. ನಂತರ ಅವರು ತಮ್ಮ ಸಹೋದರರಿಗೆ ಕ್ಷಮೆ ನಿಡಿದರು. ಮತ್ತು ಅವರು ಕೇವಲ ಇಷ್ಟೆ ಹೇಳಿದರು. ನೀವು ನನಗೆ ಕೇಡನ್ನು ಬಯಸಿದ್ದೀ ಆದರೆ ಅಲ್ಲಾಹನು ಹಿತವನ್ನೀಡಿದನು.

ಇದೀಗ ಈ ಸುಂದರವಾದ ಮಸೀದಿಯನ್ನು ನೋಡುವಾಗ ಅದು ಈ ಮುಬಾಹಲದ ಜಾಗದಲ್ಲಿ ಅಂದರೆ ಝಾಯಿನ್‌ನಲ್ಲಿ ನಿರ್ಮಾಣಗೊಂಡಿದ್ದನ್ನು ನೋಡಿದಾಗ ನನಗೆ ಅದೇ ಯೂಸೂಫ್(ಅ) ಅವರ ನೆನಪು ಬರುತ್ತಿದೆ. ಜಾನ್ ಡೂಯಿ ಕೆಡುಕನ್ನು ಬಯಸಿದ್ದನು. ಆದರೆ ದೇವನು ಒಳಿತನ್ನುಂಟು ಮಾಡಿದನು ಮತ್ತು ಒಂದು ಮಹೋನ್ನತ ವಿಜಯ ಅಹ್ಮದಿಯಾ ಜಮಾಅತಿನ ಪಾಲಾಯಿತು.

ಅವರು ಹೇಳಿದರು. ನಾವು ಈ ಸಂಜೆ ಆ ಅಹ್ಮದಿಯರನ್ನು ನೆನಪಿಡಬೇಕಾಗಿದೆ. ಅವರು ಲೋಕದ ಒಂದು ಪ್ರತ್ಯೇಕ ಭಾಗವಾಗಿ ಪಾಕಿಸ್ತಾನದಲ್ಲಿದ್ದು, ಕೇವಲ ತಮ್ಮ ಧಾರ್ಮಿಕ ವಿಶ್ವಾಸದಿಂದಾಗಿ ದಿನನಿತ್ಯ ಹಿಂಸೆ ದಬ್ಬಾಳಿಕೆ ದ್ವೇಷವನ್ನು ಎದುರಿಸುತ್ತಿದ್ದಾರೆ. ಅಲ್ಲಿ ಸರಕಾರವಿದ್ದರೂ ತಮ್ಮನ್ನು ಒಂಟಿಯಾಗಿಯೇ ಭಾವಿಸಬೇಕಾಗಿದೆ. ಏಕೆಂದರೆ ಸರಕಾರವು ಅವರಿಗೆ ಸುರಕ್ಷತೆಯನ್ನು ನಿರಾಕರಿಸುತ್ತದೆ. ಪೋಲೀಸ್ ಅವರಿಗೆ ರಕ್ಷಣೆ ನೀಡುವುದಿಲ್ಲ ಮತ್ತು ಇತರ ಧಾರ್ಮಿಕ ಮುಂಡರು ಮತ್ತು ಅವರ ಅನುಯಾಯಿಗಳು ಹಲ್ಲೆ ನಡೆಸುವಂತೆ ಪ್ರೇರಣೆ ನೀಡುತ್ತಾರೆ.

ಕೆಲ ದಿನಗಳ ಹಿಂದೆ ಅಹ್ಮದಿಯಾ ಜಮಾಅತಿಗೆ ಸೇರಿದವರೊಬ್ಬರು ಒಂದು ಹೊಸ ರೀತಿಯ ಹಿಂಸೆಯ ರೂಪವನ್ನು ತಿಳಿಸಿಕೊಟ್ಟರು. ಅದೇನೆಂದರೆ ಧಾರ್ಮಿಕ ಮುಖಂಡನೊಬ್ಬ ತನ್ನ ಅನುಯಾಯಿಗಳನ್ನು ಓರ್ವ ಅಹ್ಮದಿ ಗರ್ಭಿಣಿ ಮಹಿಳೆಯ ಮೇಲೆ ಹಲ್ಲೆ ನಡೆಸುವಂತೆ ಪ್ರೇರಣೆ ನೀಡುತ್ತಿದ್ದಾನೆ. ಹೆಚ್ಚು ಅಹ್ಮದಿ ಮಕ್ಕಳು ಜನನವಾಗದಂತೆ ತಡೆಯಲು, ಇದು ಅತ್ಯಂತ ಭಯಾನಕವಾದ ಅಪರಾಧವಾಗಿದೆ. ಮತ್ತು ಮಾನವನ ಮೂಲಭೂತ ಹಕ್ಕಿನ ವಿರುದ್ಧವಾಗಿದೆ. ಆದುದರಿಂದ ನನ್ನ ದೃಷ್ಟಿಯಲ್ಲಿ ಅತ್ಯಂತ ಮುಖ್ಯವಾದ ವಿಷಯವೇನೆಂದರೆ ಅಹ್ಮದಿಯಾ ಜಮಾಅತ್ ತಿಳಿದುಕೊಳ್ಳಲಿ, ಇತರ ಅಹ್ಮದಿ ಬಾಂಧವರ ಜೊತೆ ಜೊತೆಯಲ್ಲಿ ನಾವು ಸಹ ಇದ್ದೇವೆ. ನಾವಂತೂ ಈ ಸಂಘಟನೆಯೊಂದಿಗೆ ಸಂಬಂಧಿಸಿದವರಲ್ಲ.

ನಾನು ನಮ್ಮ ಅಹ್ಮದಿ ಸಹೋದರಿ ಸಹೋದರರಿಗೆ ತಿಳಿಯಬಯಸುತ್ತೇನೆ. ನಾವು ಖಂಡಿತವಾಗಿಯೂ ಪರಸ್ಪರ ಸಹೋದರ ಹೊಂದಿವರಾಗಿದ್ದೇವೆ. ನಿಮ್ಮ ಸದಾಚಾರ ಮತ್ತು ಶಿಕ್ಷಣವನ್ನು ಬಲ್ಲವರಾಗಿದ್ದೇವೆ ಮತ್ತು ಪಾಕಿಸ್ತಾನದಲ್ಲಿ ಉಪಸ್ಥಿತರಿರುವ ಅಹ್ಮದಿ ಸಹೋದರರ ಸಂಕಷ್ಟಗಳನ್ನು ತಿಳಿದವರಾಗಿದ್ದೇವೆ. ನಾವು ನಿಮಗೆ ಹೇಳಬಯಸುತ್ತೇವೆ. "ಎಲ್ಲಿ ನೀವು ಹೋಗುವಿರಿ, ಅಲ್ಲಿ ನಾವು ಹೋಗುವೆವು, ಎಲ್ಲಿ ನೀವು ನಿಲ್ಲುವಿರಿ, ಅಲ್ಲೇ ನಾವು ನಿಲ್ಲುತ್ತೇವೆ. ನಾವು ನಿಮ್ಮ ಜೊತೆಗಿದ್ದೇವೆ ಮತ್ತು ಕೊನೆಯವರೆಗೂ ಜೊತೆ ನಿಲ್ಲುವೆವು. ನಮಗೆ ನಿಮ್ಮ ಮೇಲೆ ವಿಶ್ವಾಸವಿದೆ ಮತ್ತು ಇಂದಿನ ಮಹತ್ವವಾದ ಸಮಾರಂಭದಲ್ಲಿ ಭಾಗವಹಿಸಿದ್ದು ನಮಗೆ ಗೌರವದ ವಿಷಯವಾಗಿದೆ. ನಾನು ನಿಮ್ಮೆಲ್ಲರಿಗೂ ಕೃತಜ್ಞರಾಗಿದ್ದೇನೆ. ನೀವು ನನಗೆ ಇದರಲ್ಲಿ ಭಾಗವಹಿಸಲು ಅನುಮತಿ ನೀಡಿದ್ದೀರಿ. ಧನ್ಯವಾದಗಳು.

ಅನಂತರ ಮುಕರ್ರಮ್ ಅಮೀರ್ ಸಾಹಿಬ್ ಅಹ್ಮದಿಯಾ ಜಮಾಅತ್ U.S.A. ಮುಕರ್ರಮ್ ಸಾಹಿಬಾದ ಮಿರ್ಝಾ ಮುಗ್ಫೂರ್ ಅಹ್ಮದ್ ಸಾಹಿಬ್ ವೇದಿಕೆಗೆ ಬಂದು ಹುರ್ಝೂರೆ ಅನ್ವರ್ ಅವರಿಗೆ ಭಾಷಣ ಮಾಡಲು ಕೇಳಿಕೊಂಡರು.

### ಹುರ್ಝೂರೆ ಅನ್ವರ್(ಅಬಿಅ) ಅವರ ಭಾಷಣ

ಆರು 6 ಗಂಟೆ 55 ನಿಮಿಷಕ್ಕೆ ಹುರ್ಝೂರೆ ಅನ್ವರ್(ಅಬಿಅ) ಇಂಗ್ಲೀಷ್‌ನಲ್ಲಿ ಅತಿಥಿಗಳನ್ನು ಸಂಬೋಧಿಸಿ ಮಾತನಾಡಿದರು. ಅದರ ಉರ್ದು ಅನುವಾದ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಬಿಸ್ಮಿಲ್ಲಾಹ್. . ದೊಂದಿಗೆ ತನ್ನ ಭಾಷಣ ಪ್ರಾರಂಭಿಸಿದರು. ಮತ್ತು ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹ್ ವ ಬರಕಾತುಹು ಹೇಳಿದರು. ಅನಂತರ ಅವರು ಹೇಳಿದರು

ಪ್ರಪ್ರಥಮವಾಗಿ ಇಂದಿನ ಸಂಜೆ ನಮ್ಮ ಜೊತೆಯಲ್ಲಿರುವವರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸಬಯುಸುತ್ತೇನೆ. ಈ ಸಮಾರಂಭ ಲೌಕಿಕ ಸಮಾರಂಬವೇನಲ್ಲ, ಬದಲು ವಿಶೇಷವಾದ ಧಾರ್ಮಿಕ ಸಮಾರಂಭವಾಗಿದೆ. ಅದರ ಆಲೋಚನೆ ಇಂದು ಇಸ್ಲಾಮಿ ಸಂಘಟನೆ ಆಯೋಜಿಸಿರುತ್ತದೆ. ಆದುದರಿಂದ ಈ ಸಮಾರಂಭದಲ್ಲಿ ನಿಮ್ಮ ಉಪಸ್ಥಿತಿ ನಿಮ್ಮ ಹೃದಯ ವೈಶಾಲ್ಯ, ಸಹನೆ ಮತ್ತು ವಿಶಾಲ ದೃಷ್ಟಿಕೋನವನ್ನು ಸೂಚಿಸುತ್ತದೆ. ಆದುದರಿಂದ ಇಂದು ಇಲ್ಲಿ ಝಾಯಿನ್‌ನಲ್ಲಿ ನಮ್ಮ ಹೊಸ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ನಮ್ಮ ಜೊತೆ ಭಾಗವಹಿಸಿದಕ್ಕೆ ಹೃತ್ಪೂರ್ವಕವಾಗಿ ತಮ್ಮೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಹುರ್ಝೂರೆ ಅನ್ವರ್(ಅಬಿಅ) ಹೇಳಿದರು. ಈ ನಗರದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪನೆಯು ಎಷ್ಟೋ ದಶಕಗಳ ಹಿಂದೆಯೇ ಆಗಿತ್ತು. ಆದರೆ ನಮ್ಮ ಬಳಿ ಅಧೀಕೃತವಾದ ಯಾವುದೇ ಮಸೀದಿ ಆರಾಧನೆ ಮಾಡಲು ಇರಲಿಲ್ಲ. ಆದುದರಿಂದ ಇಂದಿನ ದಿನ ನಮ್ಮ ಜಮಾಅತಿಗೆ ತುಂಬಾ ಮಹತ್ವದ್ದು ಮತ್ತು ಸಂತೋಷದ ದಿನವಾಗಿದೆ. ನಿಶ್ಚಯವಾಗಿಯೂ ಎಲ್ಲ ಧಾರ್ಮಿಕ ಸಂಘಟನೆಗಳಿಗೆ ಇಂತಹದೊಂದು ಸ್ಥಲ ಜನರು ಕೂಡಿ ಆರಾಧನೆ ಮಾಡಲು ಲಭಿಸಿದ್ದು ತುಂಬಾ ಮಹತ್ವದ್ದಾಗಿದೆ. ಅದಕ್ಕೆ ಇಸ್ಲಾಮಿಗೆ ಸಂಬಂಧಿಸಿ ಹೇಳುವುದಾದರೆ ಮಸೀದಿಯಿಂದ ಎರಡು ರೀತಿಯ ಪ್ರಯೋಜನಗಳಿವೆ. ಒಂದನೆಯದಾಗಿ ಮಸೀದಿ ಮುಸಲ್ಮಾನರಿಗೆ ಒಟ್ಟಾಗಿ ಅಲ್ಲಾಹನ ಆರಾಧನೆ ಮಾಡಲು ಮತ್ತು ಧಾರ್ಮಿಕ ಕರ್ತವ್ಯಗಳನ್ನು ಪಾಲಿಸಲು ಸಂದರ್ಭ ಒದಗಿಸಿಕೊಡುತ್ತದೆ. ಉದಾಹರಣೆಗೆ ಮುಸಲ್ಮಾನರಿಗೆ ಐದು ಹೊತ್ತು ಆರಾಧನೆ ಮಾಡುವ ಆಜ್ಞೆಯಿದೆ. ಅದಲ್ಲದೇ ಮಸೀದಿ ನಿರ್ಮಾಣದ ಇನ್ನೊಂದು ಪ್ರಯೋಜನವೆಂದರೆ ಮಸೀದಿಯ ಮೂಲಕ ಸಮಾಜದ ಇತರ ಜನರನ್ನು ಇಸ್ಲಾಮಿನ ಶಿಕ್ಷಣಗಳಿಂದ ಪರಿಚಯಿಸಬಹುದಾಗಿದೆ. ಎಲ್ಲರೂ ಅತ್ಮಪೂರ್ವಕವಾಗಿ ಮಸೀದಿಯಲ್ಲಿ ಆರಾಧನೆ ಮಾಡುವವರಾದರೆ, ಅವರು ನಿಜ ಅರ್ಥದಲ್ಲಿ ಇಸ್ಲಾಮಿ ಶಿಕ್ಷಣವನ್ನು ಬಲ್ಲವರಾದರೆ, ಆ ಶಿಕ್ಷಣವನ್ನು ನಡತೆಯ ಮೂಲಕ ಪ್ರದರ್ಶಿಸಿದಂತಾಗುವುದು, ಸಹಜವಾಗಿಯೇ ಸ್ಥಳೀಯ ಜನರಲ್ಲಿ ಇಸ್ಲಾಮಿನ ಕುರಿತು ಅವರ ಜ್ಞಾನ ವೃದ್ಧಿಯಾಗುವುದು ಮತ್ತು ಮುಸಲ್ಮಾನರು ಶಾಂತಿಯುತವಾಗಿ ವಾಸಿಸುತ್ತಾ ಮತ್ತು ಸಮಾಜದ ಸಕಾರಾತ್ಮಕ ಭಾಗವಾಗುವುದನ್ನು ನೋಡಿ ಅವರ ಹೃದಯಗಳಿಂದ ಭಯ ಹಾಗೂ ಆತಂಕಗಳು ದೂರವಾಗುವುದು. ಇನ್‌ಶಾಅಲ್ಲಾಹ್. ಹಾಗೆ ಈ ಎರಡು ಉದ್ದೇಶಗಳನ್ನು ಪೂರ್ಣಗೊಳಿಸಲು ಅಹ್ಮದಿಯಾ ಜಮಾಅತ್ ಲೋಕದಲ್ಲೆಲ್ಲ ಮಸೀದಿಗಳನ್ನು ನಿರ್ಮಿಸುತ್ತಿದೆ.

(ಮುಂದುವರಿಯುವುದು)

*ವಿಶೇಶ ಸೂಚನೆ* "ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.